ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಡಾ : ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, " ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೀಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

2. ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2004

ಡಾ : ವಿ.ಎಸ್. ಆಚಾರ್ಯ : (ವೈದ್ಯಕೀಯ ಶಿಕ್ಷಣ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, " ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಘನತೆವೆತ್ತ ರಾಜ್ಯಪಾಲರ ಸಂದೇಶದೊಡನೆ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಮತ್ತು ವಿಧಾನ ಪರಿಷತ್ತಿನಿಂದ ಎರಡನೇ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲಾಯಿತು

ಡಾ : ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಸದಸ್ಯರ ಮುಂದೆ ನಾನು ಹೇಳುವಂಥದ್ದು ಇಷ್ಟೆ. ಈ ತಿದ್ದುಪಡಿ 2004ರಲ್ಲಿ ಎರಡೂ ಸದನಗಳಿಂದ ಅನುಮೋದನೆಗೊಂಡು ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಅಂಗೀಕಾರಕೋಸ್ಕರ ಕಳುಹಿಸಿಕೊಡಲಾಗಿತ್ತು. ಮಾನ್ಯ ಘನತೆವೆತ್ತ ರಾಜ್ಯಪಾಲರು ಕೆಲವು observations ಮತ್ತು ಅವರ ಕೆಲವು ಸಲಹೆಗಳನ್ನು ಕೂಡಿಸಿ ಮತ್ತೆ ಸರ್ಕಾರಕ್ಕೆ ವಾಪಸ್ಸು ಕಳುಹಿಸಿರುತ್ತಾರೆ. 28.4.04ರಲ್ಲಿ ವಾಪಸ್ಸು ಕಳುಹಿಸಿದ ನಂತರ, ಅಂದಿನ ಎಸ್.ಎಂ. ಕೃಷ್ಣರವರ ಸರ್ಕಾರ ಮಾನ್ಯ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಧ್ಯಕ್ಷತೆಯಲ್ಲಿ ಸಂಪುಟದ ಉಪ ಸಮಿತಿಯೊಂದನ್ನು ರಚಿಸಲಾಯಿತು. ಸಂಪುಟ ಉಪ ಸಮಿತಿಯವರು ಮಾನ್ಯ ರಾಜ್ಯಪಾಲರು ತಿಳಿಸಿದಂತಹ ಸಲಹೆ, ಸೂಚನೆ ಹಾಗೂ ಟಿಪ್ಪಣಿಗಳೆಲ್ಲವನ್ನೂ ಪರಿಶೀಲಿಸಿ ಸರ್ಕಾರಕ್ಕೆ ಒಂದು ವರದಿ ಕೊಟ್ಟರು. ಆ ವರದಿಯ ಆಧಾರದಲ್ಲಿ ಕಳೆದ ಜೂನ್ ತಿಂಗಳಿನಲ್ಲಿ ಅದರ ಬಗ್ಗೆ ಸರ್ಕಾರ ಕೆಲವು ನಿರ್ಧಾರಗಳನ್ನು ಪ್ರಕಟಿಸಿತು ಮತ್ತು ಮಾನ್ಯ ಘನತೆವೆತ್ತ ರಾಜ್ಯಪಾಲರು ಸೂಚಿಸಿದ ಸಲಹೆಗಳ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ಇವೊತ್ತು ನಾವು ತಂದಿದ್ದೇವೆ. ಇದರಲ್ಲಿ ಪ್ರಮುಖವಾಗಿ ಇರುವಂಥದ್ದು ಮೊದಲನೆಯದು, land use ಬಗ್ಗೆ. ಇದು Karnataka Town Planning ಇಡಿ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಇರುವ ಬೇರೆ ಬೇರೆ ವ್ಯಾಪ್ತಿಯಲ್ಲಿ ಮತ್ತು ಕರ್ನಾಟಕದಲ್ಲಿ 200ಕ್ಕೂ ಹೆಚ್ಚು ಇರತಕ್ಕಂಥ ನಗರಸಭೆ, ಪುರಸಭೆ ಮತ್ತು ಆರು ಕಾರ್ಪೊರೇಷನ್‌ಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಅದಕ್ಕೆ ಇತರೆ ಬಿಲ್‌ಗಳೆಂದು ಇದೆ. ಇದರಲ್ಲಿ land use ಏನಾದರೂ variation ಆಗಿದ್ದರೆ, ಮತ್ತು set back ಬಿಡುವಂತಹದ್ದು ಅಂದರೆ, ರಸ್ತೆ ಮಧ್ಯದಿಂದ ಕಟ್ಟಡದ ಲೈನಿಗೆ ಎಷ್ಟು set back ಇರಬೇಕು ಎನ್ನುವಂತಹ ವಿಷಯದಲ್ಲಿ ಮತ್ತು ಕಟ್ಟಡಗಳಲ್ಲಿ basement ಎಂದು ಮಾಡಿದ್ದನ್ನು parking ಗೆಂದು ಕೊಡುವ ಮೂಲಕ ಅದನ್ನು ಬೇರೆ ಉದ್ದೇಶಗಳಿಗೆ ಬಳಸಿದರೆ, ಆ ವಿಷಯದ ಬಗ್ಗೆ ಮತ್ತು Floor Area Ratio ವ್ಯತ್ಯಾಸಗಳೇನಾದರೂ ಆಗಿದ್ದರೆ, ಅದರ ಬಗ್ಗೆ ಮತ್ತು ಇದರಲ್ಲಿ ಮಾಡಿದಂತಹ ತಪ್ಪುಗಳನ್ನು ಬೇರೆ ಬೇರೆ ಕಾರಣಗಳಿಂದ ಅನೇಕ ವರ್ಷಗಳಿಂದ ತಮ್ಮದೇ ಜಾಗದಲ್ಲಿ, ಇದರಲ್ಲಿ ಸರ್ಕಾರಿ ಜಾಗದ ಅತಿಕ್ರಮಣದ ಪ್ರಶ್ನೆಯೇ ಇಲ್ಲ ಅಥವಾ ಯಾವುದಾದರು ಕಾರ್ಪೋರೇಷನ್ ಮುನ್ಸಿಪಾಲಿಟಿ ಜಾಗಗಳನ್ನು ಅತಿಕ್ರಮಣ ಮಾಡಿದ್ದಕ್ಕೆ ಸಂಬಂಧವಿಲ್ಲ. ಬೆಂಗಳೂರಿನಲ್ಲಿ ಮಾನ್ಯ

ಸದಸ್ಯರಾದ ಶ್ರೀ ಎ.ಟಿ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸರ್ಕಾರಿ ಜಮೀನು ಕಬಳಿಕೆ ಕುರಿತಂತೆ ಪರಿಶಿಲಿಸುತ್ತಿರುವ ಸಮಿತಿಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ಇದು ಕೇವಲ ಅವರವರಿಗೆ ಸೇರಿದಂತಹ ಜಾಗದಲ್ಲಿ ಕಾನೂನಿನ ಅಜ್ಞಾನದಿಂದಲೋ ಅಥವಾ ಬೇರಾವುದೇ ಕಾರಣಗಳಿಂದ set backನಲ್ಲಿ ಸ್ವಲ್ಪ ಹೆಚ್ಚು–ಕಡಿಮೆಯಾಗಿದ್ದರೆ ಅಥವಾ basement ವಿಷಯದ ನಿಯಮಾವಳಿಯಲ್ಲಿ ಬದಲಾವಣೆಯಾಗಿದ್ದರೆ, ನಿಯಮಗಳಿಗೆ ತದ್ವಿರುದ್ಧವಾಗಿದ್ದರೆ, ಇದರ ಬಗ್ಗೆ ಆಗಿರಬಹುದಾದಂತಹ ತಪ್ಪುಗಳನ್ನು one time ಸರಿಪಡಿಸಬೇಕೆಂದು ಹೇಳುವಂತಹ ದೃಷ್ಟಿಯಿಂದ 2004ರಲ್ಲಿ ತಂದಿರುವಂತಹ ಕಾನೂನು ಇದಾಗಿದೆ. ಆದರೆ, ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತು ಈ ರೀತಿ ಪ್ರಕರಣಗಳು ಇಡೀ ರಾಜ್ಯಾದ್ಯಂತ ತುಂಬಾ ಇರುವುದನ್ನು ಮನಗಂಡು ಮತ್ತು ಅನೇಕರು ಕಟ್ಟಿರುವ ಮನೆಗಳಿಗೆ ಮಾಡಿರುವ ಸಾಲವನ್ನು ತೀರಿಸುವ ಮುಂಚೆಯೇ ಅದರಲ್ಲಿ set back ಗೆ ಸಂಬಂಧಿಸಿದಂತೆ ಏನೋ Violation ಆಗಿದೆಯೆಂದು ಆ ಕಟ್ಟಡ Demolition ಆಗುವಂತಾದ್ದು ಪತ್ರಿಕೆಗಳಲ್ಲಿ ಅದರ ಫೋಟೋ ಬರುವಂತಾದ್ದು, ಮೊನ್ನೆ ದೆಹಲಿಯಲ್ಲಿ ಏನಾಯಿತು? ಗೋಲಿಬಾರ್ ಆಗಿ ಎಷ್ಟೋ ಜನರು ಸತ್ತಿರುವಂಥದ್ದು ಇದೆಲ್ಲದರ ಹಿನ್ನಲೆಯಲ್ಲಿ ಇದರ ಬಗ್ಗೆ ಸಾರ್ವಜನಿಕವಾಗಿ ಒಂದು ರೀತಿಯಲ್ಲಿ ತುಂಬಾ ಪ್ರೆಶರ್ ಇದೆ ಮತ್ತು ಕೋರ್ಟುಗಳೂ ಸಹ ಇದರಲ್ಲಿ ನೀವು ಏನಾದರೂ ಸರಿಪಡಿಸುವುದಕ್ಕೆ ಸಾಧ್ಯವಿದ್ದರೆ, ಸರಿಪಡಿಸಿ ಎಂದು ಎದುರು ನೋಡುತ್ತಿವೆ.

5.30 ಪಿ.ಎಂ

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ತಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ. ನಿವೇಕೆ ಈ ಬಿಲ್ಲಿಗೆ ಕೈಹಾಕಿದಿರೋ ಗೊತ್ತಿಲ್ಲ. ಇದು ನಿಮ್ಮ ಪೋರ್ಟ್ ಫೊಲಿಯೊ ಕೂಡ ಅಲ್ಲ. Even before you could proceed further ಯಾರೋ ಒಬ್ಬ ಮಿಡಲ್ ಕ್ಲಾಸ್‌ನವನು ಒಂದು ಮನೆ ಕಟ್ಟುವಾಗ ಮೆಟ್ಟಿಲು ಅ ಕಡೆ ಹೋಗುವುದು, ವಾಟರ್ ಟ್ಯಾಂಕ್ ಈ ಕಡೆಗೆ ಬರುವುದೋ ಒಂದು ಅಡಿ ಆಚೆ ಈಚೆ ಹೋದರೆ ಅವನೆಲ್ಲಾ ಮಾಡುವುದಕ್ಕೆ ತೊಂದರೆ ಇಲ್ಲ ಬೆಂಗಳೂರಿನಲ್ಲಿ ಅಪಾರ್ಟಮೆಂಟ್ ಬಿಲ್ಡ್‌ರ್ಸ್ ಇವರೆಲ್ಲಾ ಇದ್ದಾರಲ್ಲಾ, ಅವರೆಲ್ಲಾ ಸ್ಯಾಂಕ್ಷನ್ ಪ್ಲಾನನ್ನು ಟೋಟೆಲ್ ಆಗಿವಯಲೇಟ್ ಮಾಡಿ ಪ್ಲಾನಿಗೆ ಯಾವುದೇ ಬೆಲೆಯನ್ನು ಕೊಡದೆ ಮನಸ್ಸಿಗೆ ಬಂದಂತೆ ಮಾಡಿ, ಪಾರ್ಕಿಂಗ್ ಏರಿಯಗಳನ್ನೆಲ್ಲಾ ತೆಗೆದು ಮಾಡಿರುವವರಿಗಲ್ಲಾ occupancy certificateನ್ನು ಕಾರ್ಪೊರೇಷನ್‌ನವರು ಕೊಟ್ಟು ಬಿಟ್ಟುಬಿಟ್ಟಿದ್ದಾರೆ. ಅವೆಲ್ಲಾ ಇದರ

ಪರಿಮಿತಿಯಲ್ಲಿ ಬರುವುದಿದ್ದರೆ ದಯಮಾಡಿ ಇದನ್ನು ಈವತ್ತು ತೆಗೆದುಕೊಳ್ಳಲು ಹೋಗಬೇಡಿ. ಅದು ದೊಡ್ಡ ಹಗರಣ. If commercial buildings are coming under the purview of this, then it is a big scandal. Kindly don't lay your your hands to it now. Let us discuss at lengh and take it up. ತಮಗೆ ಕೇಳುತ್ತೇನೆ. ಎಂ.ಜಿ. ರಸ್ತೆಯಲ್ಲಿ ಮಣಿಪಾಲ್ ಕಟ್ಟಡವಿದೆ. ಅದೊಂದನ್ನೇ ನಾಳೆ ಬೆಂಗಳೂರಿಗೆ ಹೋದ ತಕ್ಷಣ ಪರಿಶೀಲನೆ ಮಾಡಿ. ಅವರಿಗೆ ಪಾರ್ಕಿಂಗ್ ಎಲ್ಲಿದೆ ನೋಡಿ? ಪಾರ್ಕಿಂಗ್ ಎಲ್ಲವನ್ನೂ ವಯಲೇಟ್ ಮಾಡಿ ಅವರು construct ಮಾಡಿದ್ದಾರೆ.

ಡಾ : ವಿ.ಎಸ್. ಆಚಾರ್ಯ : ನನಗೆ ಐದು ನಿಮಿಷ ಅವಕಾಶ ಕೊಡಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾನು ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ತಮಗೆ ಇಷ್ಟೇ ಹೇಳುತ್ತಿದ್ದೇನೆ. ವಾಣಿಜ್ಯ ಸಮುಚ್ಚಯಗಳು ಇದರ ವ್ಯಾಪ್ತಿಯೊಳಗೆ ಬರುವುದಾದರೆ, ಇದು ಸರಳವಾದಂಥ ಮಸೂದೆಯಲ್ಲ. ಇದರ ಬಗ್ಗೆ ನಾವು ಕುಳಿತು ಚರ್ಚೆ ಮಾಡಬೇಕಾಗುತ್ತದೆ, ಅಪಕೀರ್ತಿಗೆ ಪಾಲಾಗಬೇಡಿ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನ I am appealing to the Chief Minister; commercial buildings ಇದರ ವ್ಯಾಪ್ತಿಯಲ್ಲಿ ಬರುವುದಾದರೆ, ನೀವು ಈವತ್ತು ಇದನ್ನು ರೆಗ್ಯುಲರೈಸ್ ಮಾಡಿಕೊಂಡರೆ, ಈ ಬಿಲ್ಲನ್ನು ಇಂಥ ಸನ್ನಿವೇಶದಲ್ಲಿ ಪಾಸ್ ಮಾಡಿಕೊಂಡರೆ, ಅಪಕೀರ್ತಿಗೆ ಪಾಲಾಗುತ್ತೀರಿ ದಯಮಾಡಿ ಅದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಎ. ಕೃಷ್ಣಪ್ಪ : ಇವತ್ತು ಇದರಲ್ಲಿ ಕೊಟ್ಟಿರುವಂಥ coverage ಏನಿದೆ, ಅದು 6–7 ಪುಟಗಲು ಇದ್ದು, ಇದನ್ನು ಅಭ್ಯಾಸ ಮಾಡಿದಾಗ ಮೇಲ್ನೋಟಕ್ಕೆ ಏನು ಕಾಣೀಸುತ್ತದೆ ಎಂದರೆ, ಎಲ್ಲಾ commercial building ಗಳು, apartments, complexಗಳು Nursing Home ಬೇರೆ ಬೇರೆ ಏನೇನು ಕಟ್ಟಿದ್ದಾರೆ ಎಲ್ಲವೂ ಇದರಲ್ಲಿದೆ. ಕೇವಲ ಹಾವುಗಳು, ಚೇಳುಗಳು, ನಾಗಸರ್ಪಗಳೆ ಇದರಲ್ಲಿ ಇರುವುದು. ಕಾರಣವೇನೆಂದರೆ, ಮೊನ್ನೆ ರಾಮಸ್ವಾಮಿಯವರ ಸಮಿತಿ ಏನು ನಮ್ಮ ಕ್ಷೇತ್ರದಲ್ಲಿಯೂ ಗುರುತು ಮಾಡಿದ್ದಾರೆ, 75% ಎಲ್ಲಾ violation ಇದ್ದು, ಅದರಲ್ಲಿ site owners ಇದ್ದಾರೆ. ಅವರಿಗೀಗ ಸಹಾಯವಾಗುತ್ತದೆ. Apartments ಅನ್ನು ಯಾವನೋ ಕಟ್ಟಿದ, ಮಾರಿದ, ಹೊರಟು ಹೋದ. ಈಗ ಅಲ್ಲಿರುವವರು ಆಗಿದ್ದಾರೆ. ಹಾಗಿದ್ದಮೇಲೆ, ಅಂಥ ಎಷ್ಟು ಸಂಖ್ಯೆಗಳು, ಮಾಹಿತಿಗಳು ನಿಮ್ಮ ಸರ್ಕಾರದ ದಾಖಲೆಗಳಲ್ಲಿವೆ. ಅವುಗಳನ್ನು ದಯಮಾಡಿ ಸದನದ ಮುಂದೆ ಇಡಿ. We can go for individual discussions. Commercial, non-commercial,

semi-commercial ಮತ್ತು residential apartment, Nursing Homeಗಳನ್ನು ಇಚ್ಛಾನುಸಾರ ಕಟ್ಟಿದ್ದಾರೆ. ಆದ್ದರಿಂದ, ನಾವು ಪ್ರಾರ್ಥನೆ ಮಾಡುವುದೇನೆಂದರೆ, ಇಲ್ಲಿ ಎಲ್ಲಾ ಮಾನ್ಯ ಸದಸ್ಯರಾಗಿದ್ದಾಗ ಇದಕ್ಕೊಂದು ಸಂಪೂರ್ಣವಾದಂಥ ಮಾಹಿತಿಗಳನ್ನು ಕೊಡಬೇಕು. Council ಇದನ್ನು ಮಾಡಿದೆ approve ಮಾಡಿದೆ ಎಂದರೆ, ಆ ಜವಾಬ್ದಾರಿಯನ್ನು ನಾವು ಹೊತ್ತುಕೊಳ್ಳುವುದಕ್ಕಾಗುವುದಿಲ್ಲ. We are directly representing the problems and feelings of the people. We are also insisting the Honourable Government to solve the day to day difficulties and to set right the bottlenecks. ಏನಾಗಿದೆ? ನಮ್ಮ airport road ನಲ್ಲಿ ಇಷ್ಟಾನುಸಾರ ಕಟ್ಟಿಬಿಟ್ಟರು. National Highway ಅನ್ನು 6 lane ಮಾಡುತ್ತಿದ್ದಾರೆ, ಇಷ್ಟಾನುಸಾರ ದೇವಸ್ಥಾನ, ಮಸೀದಿಗಳು, ಆಂಜನೇಯನ ದೇವಸ್ಥಾನ ಕಟ್ಟಿದರು, complex ಗಳನ್ನು ಕಟ್ಟಿದರು. ಈಗ ಅವುಗಳನ್ನು ಒಡೆಯಲಿಕ್ಕೆ ಎಷ್ಟು ಕಷ್ಟವಾಗುತ್ತಿದೆ ಎಂಬುದು ನಮಗೆ ಗೊತ್ತು. ನೀವು regularize ಮಾಡಿಕೊಟ್ಟುಬಿಟ್ಟರೆ most important developmental activities ಆಗುವ ಜಾಗದಲ್ಲಿ ನೀವು ಅವರನ್ನು ಮುಟ್ಟಲಿಕ್ಕೂ ಆಗುವುದಿಲ್ಲ, ಅವರ ಕಡೆ ನೋಡಲಿಕ್ಕೂ ಆಗುವುದಿಲ್ಲ. As it is they are threatening us.ಈಗ ನಮ್ಮ Departmental Officers, Heads of the Departments ರವರನ್ನು ಕರೆಯಿರಿ National Highwayಯವರನ್ನಾದರೂ ಕರೆಯಿರಿ, PWD ಯವರನ್ನಾದರೂ ಕರೆಯಿರಿ. ಇವ್ಯಾವೂ ಮಾತುಕತೆ ಮಾಡದೆ, ನಮ್ಮ ತಲೆಯನ್ನು ಕೆಡಿಸಿಕೊಳ್ಳದೆ, ನಾವು ಇದಕ್ಕೆ ಹಾಗೇ ತತ್‌ಕ್ಷಣ ಮಂಜೂರಾತಿ ಕೊಟ್ಟರೆ, we are getting into major troubles. ಇದರಲ್ಲಿ ನಾನು Chief Minister ಜೊತೆ ಹಿಂದೆ meeting ಆದಾಗ ಹೇಳಿದ್ದೆ, ನೀವು ಈಗಾಗಲೇ notification ಮಾಡಬೇಕು, ಎಲ್ಲೆಲ್ಲಿ metro train ಅನ್ನು ನೀವು ಓಡಿಸುತ್ತಿದ್ದೀರಿ, ಆ ಜಾಗದಲ್ಲೆಲ್ಲಾ notify ಮಾಡಿ Bus Stationsಗೆ ಜಾಗವಿಲ್ಲ. ಇಷ್ಟಗಳ ಗೋಪಾದದಷ್ಟು ಜಾಗವಿಲ್ಲ. ನಾಳೆ Mono train ಮಾಡಬೇಕೆಂದು Chief Minister ರವರ ಕನಸು ಇದೆ ಎಂದು ಹೇಳಿದ್ದು paper ನಲ್ಲಿ ಓದಿದ್ದೆ ಆ ಉದ್ದಕ್ಕೂ ಕೂಡ ಒಂದು ಅಂಗುಲ ಜಾಗ ಸಿಕ್ಕುವುದಿಲ್ಲ. ಮುಖ್ಯಮಂತ್ರಿಗಳಿಗೆ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ಎಂಥ ಬೆಂಗಳೂರಾಗಿ ನೋಡಬೇಕೆಂಬ ನಿಮ್ಮ ಕನಸೇನಿದೆ, ಅದಕ್ಕೆ ಇದು ದೊಡ್ಡ ಮಾರಕವಾಗುತ್ತದೆ. ಇದು ಬೆಂಗಳೂರಿನಲ್ಲಿ ಕಾಲು ಶತಮಾನ ಪ್ರತಿನಿಧಿಸಿ ಆಗಿರುವ unexpected developmental activities, unplanned developmental activities, ಗೂಂಡಾಗಿರಿ activites, ವಾರಕ್ಕೆ 15 ಜನ murder ಆಗುವ activities ಅನ್ನು ನಾನು ಕಾಲು

ಶತಮಾನದಿಂದ ಆ ಪಟ್ಟಣ ಪ್ರದೇಶದ ಅಂಚಿನಲ್ಲೇ ಇದ್ದು ನೋಡಿದ್ದೇನೆ. ನಿಮಗೆ ಜನರ ಬಗ್ಗೆ, ಕಾನೂನು ಬಗ್ಗೆ ಬೆಂಗಳೂರು ಮತ್ತು ಬೇರೆ ಬೇರೆ ಪಟ್ಟಣಗಳಲ್ಲಿ ಅಭಿವೃದ್ಧಿ ಬಗ್ಗೆ ನಿಮಗೆ ಕಳಕಳಿ ಇದ್ದರೆ, ದಯಮಾಡಿ ಇದನ್ನು ನಿಮ್ಮ prestige ಆಗಿ ತೆಗೆದುಕೊಳ್ಳಬೇಡಿ, ಪಕ್ಕಕ್ಕೆ ಇಡಿ, ನಾಳೆ ನಡೆಯುವಂಥ ಸದನದಲ್ಲಿ ತೆಗೆದುಕೊಂಡು ಬನ್ನಿ. ಇಂಥ ಪ್ರಕರಣಗಳು ಎಷ್ಟಿವೆ ಎಂದು ತಾವು ಮಾಹಿತಿಗಳನ್ನು ಕೊಡಿ ಅದರಲ್ಲಿ ಸಾಧಕ-ಬಾಧಕಗಳ ಬಗ್ಗೆ ಹೇಳಿ. ಅದರಲ್ಲಿ ಬರುವ revenue ಬಗ್ಗೆ ಹೇಳಿ. ಅದಕ್ಕೆ ಜನರಿಗೆ ಆಗುವ ತೊಂದರೆಗಳೇನೇನಿವೆ? ನಾಳೆ fly over ಕಟ್ಟಬೇಕು. ಏನೇನೋ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. Airport road ನಲ್ಲಿ fly over ಗಳು ಆಗಬೇಕು Aero engines ಹತ್ತಿರ ಆಗಬೇಕು, ring road ನಲ್ಲಾಗಬೇಕು. ಇವೆಲ್ಲವನ್ನೂ ನೀವು ಅವರಿಗೆ ಕೊಟ್ಟುಬಿಟ್ಟರೆ, ಏನೂ ಕೊಡದೆ ಸರ್ಕಾರದ ಕೆಲಸವನ್ನು, ಸರ್ಕಾರದ institution ಆಗಿ standby ಮಾಡಿದ್ದಾರೆ, ಇದು ಕೊಟ್ಟರೆ ಅವರು ಇದನ್ನು ಮಾಡಲಿಕ್ಕೆ ಬಿಡುತ್ತಾರೆಯೇ? ಅದಕ್ಕಾಗಿ, development, ನಲ್ಲಿ ನಾನು ಕೂಡ ಒಬ್ಬ ಅಭಿಮಾನಿಯಾಗಿ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, urgent ಮಾಡಬೇಡಿ, ನಾವೂ, ನೀವೂ ಕುಳಿತು ಬೇಕಾದರೆ Bangalore, Mysore, Belgaum ಈ ತರಹ ಒಂದು 4 cities ನ ಪ್ರತಿನಿಧಿಗಳನ್ನು ಕರೆಯಿರಿ, ನಿಮ್ಮ Officersಅನ್ನೂ ಕರೆಯಿರಿ, ಚರ್ಚೆ ಮಾಡೋಣ. ಯಾವುದು ಅನುಕೂಲವೋ, ಅನಾನನು ಕೂಲವೋ ನೋಡಿ Next immediate Session ಗೆ ನೀವು present ಮಾಡಿ ನಮ್ಮದೇನೂ ಅಭ್ಯಂತರವಿಲ್ಲ. ದಯಮಾಡಿ, ಇದನ್ನು ನಮ್ಮ ಮುಖ್ಯಮಂತ್ರಿಗಳು ಪರಿಗಣಿಸಬೇಕೆಂದು ಹೇಳಿ ನಾನು ಪ್ರಾರ್ಥನೆ ಮಾಡುತ್ತೇನೆ.

ಡಾ : ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) : ಕೆಲವು ತಪ್ಪು ಭಾವನೆಯಿಂದ ಕೆಲವು ಮಾತುಗಳು ಬಂದಿದ್ದರಿಂದ ಸ್ಪಷ್ಟೀಕರಣ ಕೊಡಲೇಬೇಕಾಗುತ್ತದೆ. ಇದು 2004ರಲ್ಲಿ ತಂದಂಥ ಒಂದು ಕಾಯ್ದೆ. ಎರಡೂ ಸದನಗಳು ಇದನ್ನು ಮಂಜೂರು ಮಾಡಿವೆ. ಮಾನ್ಯ ಎಸ್.ಎಂ. ಕೃಷ್ಣ ಸರ್ಕಾರ ಕಾಲದಲ್ಲಿ ತಂದಂಥ ಈ ಕಾಯ್ದೆ ರಾಜ್ಯಪಾಲರ ಸಹಿಗೆ ಹೋದಾಗ ಅವರು ಕೆಲವು observation ಮಾಡಿ ಕಳುಹಿಸಿದ್ದಕ್ಕೆ ಒಂದು cabinet sub-committee ಅನ್ನು ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಮಾಡಿ, ಆ cabinet sub committee ಪರಿಶೀಲಿಸಿದ್ದನ್ನು ಈಗಿನ ಸರ್ಕಾರ ಪುನಃ ಪರಿಷ್ಕಾರ ಮಾಡಿದೆ. ಯಾವುದೇ ರಾಷ್ಟ್ರೀಯ ಹೆದ್ದಾರಿ, ಯಾವುದೇ State Highway ಬದಿಯಲ್ಲಿರತಕ್ಕಂಥ ಯಾವ building ಗಳಿಗೂ ಇದು ಅನ್ವಯವಾಗುವುದಿಲ್ಲ.

Basement ನಲ್ಲಿ ಯಾವ purpose ಗೋಸ್ಕರ ಎಂದು ಹೇಳಿದ್ದಾರೆ, ಅದರಲ್ಲೇನಾದರೂ ತಿದ್ದುಪಡಿ ಮಾಡಿ ಅಂಗಡಿ ಮಾಡಿದರೆ, ಅದಕ್ಕೆ ಈ concession apply ಆಗುವುದೇ ಇಲ್ಲ ಮತ್ತು ಯಾವುದೇ commercial building ಗೆ ಹಿಂದಿನ ಕಾಯ್ದೆಯಲ್ಲಿ set back 100 feet ಇಡಬೇಕೆಂದಿದ್ದರೆ, 50 feet ನವರೆಗೆ ರಿಯಾಯಿತಿ ಕೊಡಬಹುದೆಂದು ಇದ್ದುದ್ದನ್ನು ನಾವು ಕೇವಲ 25 feet ಅಂದರೆ 25% of the required set back ಗೆ ಎಂದು ತಿದ್ದುಪಡಿ ಮಾಡಿದ್ದೇವೆ. ಇದು one time ಇನ್ನು ಮುಂದಿನದಕ್ಕೆ ಅಲ್ಲ ಆಮೇಲೆ residential ಗೆ 50% set back ನಲ್ಲಿ ಇದು ಬಿಡುವಂಥದ್ದು ಮತ್ತು ಉಳಿದಂತೆ, ಈ floor areaದಲ್ಲಿ ಸಹ commercial ಗೆ ಕೇವಲ 25% violation ಅವರು ಜಾಗದ ಒಳಗಡೆ ಇದ್ದರೆ ಮತ್ತು ಸರ್ಕಾರಿ ಜಾಗ, Municipality ಜಾಗ ಕಬಳಿಕೆಯ ಪ್ರಶ್ನೆಯೇ ಇಲ್ಲ, ಈ ಕಾಯ್ದೆ ಅದಕ್ಕೆ ಸಂಬಂಧವೇ ಇಲ್ಲ. ಅವರವರ ಜಾಗದಲ್ಲಿ ಕಟ್ಟುವಾಗ set back ನಲ್ಲೇನಾದರೂ ಆಗಿದ್ದರೆ, 25% commercialಗೆ ಅದೂ penalty ವಸೂಲು ಮಾಡಿ, ಆ penalty ದುಡ್ಡು ಆಯಾಯ ಸ್ಥಳೀಯ, ನಗರ ಸ್ಥಳೀಯ ಸಂಸ್ಥೆಯಲ್ಲೇ ಇರುತ್ತದೆ, Copporation ನಲ್ಲೇ ಇರುತ್ತದೆ ಅಥವಾ Urban Development Authority ಅಥವಾ planning Authority ಹತ್ತಿರವಿರುತ್ತದೆ. ಅದು ಆ ಊರಿನ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳನ್ನು ವೃದ್ಧಿ ಮಾಡಲಿಕ್ಕೆ ಇರುತ್ತದೆ. ಅಧಿಕಾರಿಗಳು ಯಾರಾದರು willfully ಇದನ್ನು ಮಾಡಿದ್ದಾರೆ, ಇದರಲ್ಲಿ ಹೆಚ್ಚು ಕಡಿಮೆ ಮಾಡಿದ್ದಾರೆ ಅಥವಾ ಈ ರಿತಿಯ ಒಂದು violation ಗೆ ಅನುಕೂಲ ಮಾಡಿಕೊಟ್ಟಿದ್ದಾರೆಂದು ಇದ್ದರೆ, ಅಂಥ ಅಧಿಕಾರಿಗೆ ಶಿಕ್ಷೆ ಸಹ ಕೊಡುವಂಥ penalty clause ಇದರಲ್ಲಿದೆ. ಆದ್ದರಿಂದ, 2004ರ ಕಾನೂನನ್ನು ಮಾನ್ಯ ರಾಜ್ಯಪಾಲರು ಹೇಳಿದಂಥ suggestion ಅನ್ನೂ ಮನಸ್ಸಿನಲ್ಲಿಟ್ಟು ಕೊಂಡು ಸಾಕಷ್ಟು ಬಿಗಿ ಮಾಡಿ ತಂದಿರುವಂಥದ್ದು ಇದೆ. ಆದ್ದರಿಂದ, ಇದು 2004ರಲ್ಲಿ ಎರಡೂ ಸದನಗಳ ಅಭಿಪ್ರಾಯವೇನಿತ್ತು ಅದಕ್ಕೂ ಮುಂದೆ ಹೋಗಿ ನಾವು ಈ ಕಾನೂನನ್ನು ಬಿಗಿ ಮಾಡಿದ್ದೇವೆ ಮತ್ತು ಇದರಿಂದ ಬರತಕ್ಕಂಥ ಯಾವುದು penalty ಇದೆ, ಆ penalty ಆ ಊರಿನ, ಆ ಪ್ರದೇಶದ ಅಭಿವೃದ್ಧಿಗೆ ಉಪಯೋಗವಾಗುವುದರಿಂದ, ಅದು general consolidated fund ಗೆ ಬರುವುದಿಲ್ಲ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಏನು ನಮ್ಮ ಆಚಾರ್ಯರವರು ಹೇಳಿದರು, ಮಾನ್ಯ ಎಸ್.ಎಂ. ಕೃಷ್ಣರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, ಕೋರ್ಟ್ ಕೂಡ ಎಲ್ಲೋ ಒಂದು ಕಡೆ ತನ್ನ

ಕಳವಳವನ್ನು ವ್ಯಕ್ತಪಡಿಸಿದಂತಹ ಸಂದರ್ಭದಲ್ಲಿ, ಇದನ್ನು ಸರ್ಕಾರ ಏನಾದರೂ ಮಾಡಲಿಕ್ಕಾಗುತ್ತದೆಯೇ ಎಂದು ಹೇಳಿದಾಗ ಸರ್ಕಾರ ಇದನ್ನು ಮಾಡಿತು. ಅದಾದಮೇಲೆ ನಮ್ಮ Karnataka Act No. 11/1973 63ರ ಅಡಿಯಲ್ಲಿ 14ಬಿ ಎಂದು amendment ತಂದು ಇವತ್ತೇನು ಮಾಡುತ್ತಿದ್ದೇವೆ, ಇದರೊಳಗೆ 2–3 ವಿಚಾರಗಳನ್ನು ನಾವು ಗಮನಿಸಬೇಕಾಗಿದೆ. ಸನ್ಮಾನ್ಯ ಆಚಾರ್ಯರವರು ದಯಮಾಡಿ ಈ ಕಡೆಗೆ ಗಮನಹರಿಸಬೇಕು. ಮೊದಲನೆಯದಾಗಿ, ತಾವು ಹೇಳಿದ ಹಾಗೆ ಎಲ್ಲಾ ಕಡೆಯಲ್ಲೂ ದ್ವಂದ್ವ ಇದೆ, ಕೋರ್ಟ್ ಕೂಡ ಕಳವಲ ವ್ಯಕ್ತಪಡಿಸುತ್ತಿದೆ, ಸ್ವಂತ ಜಾಗದಲ್ಲಿ ಕಟ್ಟಿರತಕ್ಕಂಥ ಕಟ್ಟಡಗಳಿಗೆ ಅನಾನುಕೂಲವಾಗುತ್ತಿದೆ, ಗೊತ್ತಿದ್ದೋ, ಗೊತ್ತಿಲ್ಲದೆಯೋ, ಅಧಿಕಾರಿಗಳ ಶಾಮೀಲಿನಿಂದ ಇದಾಗಿದೆ, ಅದರಲ್ಲಿ ನಾನು ನಿಮಗೆ clartification ಕೇಳತಕ್ಕಂಥದ್ದು ಒಂದೇ ಒಂದು High Court & Civil Courtನಲ್ಲಿ ಹೇಳಿರತಕ್ಕಂಥ ಕೇಸ್‌ಗಳೇನಿವೆ, ಇವು ಇನ್ನೂ ನಿರರ್ಗಳವಾಗಿ ಮುಂದೂ ಕೂಡ ನಡೆದುಕೊಂಡು ಹೋಗುತ್ತವೆ. ಅದಕ್ಕಾಗಿ ನಾನು ನಮಗೆ ಹೇಳುವುದೇನೆಂದರೆ, ಇದಕ್ಕೊಂದು ನಿರ್ದಿಷ್ಟವಾದ ದಿನಾಂಕವನ್ನೇನಾದರೂ ಗೊತ್ತುಪಡಿಸಿದ್ದೀರಾ? ಇದಾದ ಮೇಲೆ ನೀವು ಯಾವ ರೀತಿಯಾಗಿ fine ಅನ್ನು fix ಮಾಡುತ್ತೀರಿ? Commercial ಮತ್ತು Residential ಹೇಗೆ ಮಾಡುತ್ತೀರಿ? ವಿಶೇಷವಾಗಿ 20x20 ಅಡಿ, 20x30 ಅಡಿ, 30x40 ಅಡಿ ಮತ್ತು 40x60 ಅಡಿಯಲ್ಲಿ ಸ್ವಂತಕ್ಕೋಸ್ಕರ ಮನೆ ಕಟ್ಟಿರತಕ್ಕಂಥವರು ಬಹುತೇಕರು ಇದ್ದಾರೆ, ಅದು Residential 50% ಎಂದು ತಾವೇನು ಮಾಡಿದ್ದೀರಿ, builiding ಇದರೊಳಗೆ, ಇದಕ್ಕೆ ಯಾವ ರೀತಿಯ ಮಾನದಂಡವನ್ನು ತಾವು ಮಾಡುತ್ತೀರಿ? ಇದನ್ನು self-declaration ಮಾಡಿಕೊಳ್ಳುವುದೋ ಅಥವಾ ಅಧಿಕಾರಿಗಳು ಹೋಗಿ ತಪಾಸಣೆ ಮಾಡಿ, ಇಷ್ಟಿಷ್ಟು percentage ನೀವು ಕಟ್ಟಿದ್ದೀರಿ ಎನ್ನಾತ್ತಾರೋ? ಇದಕ್ಕೆ ಯಾವ ರೀತಿ ತಾವು ತೀರ್ಮಾನ ಮಾಡುತ್ತೀರಿ? ಇದಲ್ಲದೆ, ಈ set back ಮತ್ತು FAR ಏನಿದೆ, ನಮ್ಮ ಕೃಷ್ಣಪ್ಪನವರು ತುಂಬಾ ಸ್ಪಷ್ಟವಾಗಿ ಹೇಳಿದರು, ಇದನ್ನು ಕೂಲಕಂಷವಾಗಿ ಪರಿಶಿಲನೆ ಮಾಡುವುದಾದರೆ, ಈ Bill ಅನ್ನೇ ನಾವು ತರಬಾರದು. ತರುವುದರಿಂದ ಏನಾಗುತ್ತದೆ ಎಂದರೆ ಮುಂದೆಯೂ ಕೂಡ ಇದು ಸಾರೋದ್ದಾರ ನಡೆದುಕೊಂಡು ಹೋಗುತ್ತದೆ ಎನ್ನುವಂತಹ ಅನುಮಾನ ಇದೆ. ಈ set backನಲ್ಲಿ ಎಂಬುದನ್ನು ತಾವು ಯಾವ ರೀತಿ ಮಾಡುತ್ತೀರಿ? ತಾವು set back ಅನ್ನು ತೆಗೆದುಕೊಳೂತ್ತೀರೋ ಅಥವಾ FAR ಅನ್ನು ತೆಗೆದುಕೊಳ್ಳುತ್ತೀರೋ? ಎರಡರಲ್ಲಿ ಯಾವುದನ್ನು ತೆಗೆದುಕೊಳ್ಳುತ್ತಿರಿ

ಎಂಬುದನ್ನು ಸ್ಪಷ್ಟಪಡಿಸ ಬೇಕು. ಇನ್ನೊಂದು, ಸನ್ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಏಕೆ ಹೇಳಿದೆ ಎಂದರೆ, ತಾವು ಬೇಕಾದರೆ ಸಿಕ್ಕಾಗ ಅದರ ಬಗ್ಗೆ ಕೂಲಂಕಷವಾಗಿ ತಮಗೆ ಹೇಳುತ್ತೇನೆ, ಇದರೊಳಗೆ ಏನಾಗಿದೆ ಎಂದರೆ ನಾವೊಂದು ಹಾಕಬೇಕಾದರೂ ಕೂಡ, ಕಾನೂನಿನಲ್ಲಿ ನಮಗೆ ಅವಕಾಶವಿಲ್ಲ. 20x30, 30x40, 40x60 ಅಡಿ ಅಳತೆಯ ನಿವೇಶನಗಳಲ್ಲಿ ಹೊರಗಡೆ staircase ಹಾಕುವುದಕ್ಕೆ ನಮಗೆ ಕಾನೂನಿನಲ್ಲಿ ಅವಕಾಶವಿಲ್ಲ. ಇಂತಹದ್ದಕ್ಕೆ ತಾವು provision ಮಾಡಿಕೊಂಡಿದ್ದೀರಾ? provision ಮಾಡಿಕೊಳ್ಳದೇ ಹೋದರೆ, ಮುಂದೆಯೂ ಕೂಡ ಇದು unauthorise ಆಗಿ ನಡೆಯುತಕ್ಕಂಥ ವಾಡಿಕೆಯಾಗುತ್ತದೆ 40x60 ಅಡಿ ನಿವೇಶನದಲ್ಲಿ ಒಂದು ಮನೆ ಕಟ್ಟಬೇಕಾದರೆ ಅವರೇನು 6 ಅಡಿ–4 ಅಡಿ ಬಿಟ್ಟುಕೊಂಡಿರುತ್ತಾರೆ, ಅಲ್ಲೇ staircase ಹಾಕುತ್ತಾರೆ. ನಮ್ಮ ಕಾನೂನು ಪ್ರಕಾರ ನಾವು ಒಳಗಡೆಯೇ staircase ಹಾಕಬೇಕು. 30x40 ರಲ್ಲೂ ಕೂಡ staircase ಹಾಕಬೇಕೆಂದು ನಮ್ಮ ಕಾನೂನಿನಲ್ಲಿ ಇಲ್ಲ. ಅದಕ್ಕೆ ಏನಾದರೂ ತಾವು provision ಮಾಡಿಕೊಂಡಿದ್ದೀರಾ? ತಾವು inside deviation ಎಂದು, ವಿಶೇಷವಾಗಿ, ನೋಡಿ, ಏಕೆ ಕೃಷ್ಣಪ್ಪನವರು ಮತ್ತು ರಮೇಶ್ ಕುಮಾರ್ ಸಾಹೇಬರು ಹೇಳಿದರು ಎಂದರೆ, ಇದರಲ್ಲಿ ಒಂದೇ ಒಂದು ಅಡಕವಾಗಿರತಕ್ಕಂಥ ದೊಡ್ಡ ಗಂಡಾಂತರ ಏನೆಂದರೆ, ಸನ್ಮಾನ್ಯ ಆಚಾರ್ಯ ಸಾಹೇಬರೇ, ಎಲ್ಲೆಲ್ಲಿ deviation ಆಗುತ್ತವೆ ಎಂದರೆ, ದೊಡ್ಡ ದೊಡ್ಡ apartments ಗಳೇನಿವೆ, ಹೊರಗಡೆ FAR correct ಆಗಿ ಇರುತ್ತದೆ, ಒಳಗಡೆ ನೂರಕ್ಕೆ ಇನ್ನೂರು ಪಟ್ಟು deviation ಮಾಡಿರುತ್ತಾರೆ. ತಾವು ಏನಾದರೂ ಇದಕ್ಕೆ self-declaration ಕೊಡಿ ಎಂದರೆ, ಅದೂ ಆಗುವುದಿಲ್ಲ. ಅಧಿಕಾರಿಗಳಿಗೆ ನೋಡಿ ಏನಾದರೂ ಮಾಡಿ ಎಂದರೆ, ಇದು ಒಂದು ರೀತಿಯಲ್ಲಿ ಕರ್ಮಕಾಂಡವಾಗುತ್ತದೆ. ಈ ಕರ್ಮಕಾಂಡಕ್ಕೆ ಕೇವಲ ತಾವಾಗಲಿ ಅಥವ ಈ ಸರ್ಕಾರವಾಗಲಿ ಕಾರಣವಲ್ಲ. ಇದು ಸುಮಾರು 20 ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಒಂದು ಪದ್ದತಿಯಾಗಿ ಹೋಗಿದೆ. ಈ ಪದ್ಧತಿಗೆ ಒಂದು ತಿಲಾಂಜಲಿಯನ್ನು ಮಾಡಬೇಕೆಂಬ ತಮ್ಮ ಭಾವನೆ, ಏನಿದೆ. ಅದರಲ್ಲಿ ತುಂಬಾ ಜಾಗರೂಕತೆ ವಹಿಸಬೇಕಾಗಿರತಕ್ಕಂಥದ್ದು, Apartment ಗಳು High-rise buildingಗಳು ಒಂದನ್ನು ನಾನು ತಮಗೆ ಸ್ಪಷ್ಟವಾಗಿ ಹೇಳುತ್ತೇನೆ. ಯಾವುದೋ ಒಂದು ರಸ್ತೆಯನ್ನು FAR ಎಂದು ತೋರಿಸುತ್ತಾರೆ. 10 ಅಡಿx 12 ರಸ್ತೆಯಲ್ಲೂ ಕೂಡ ಏಳೆಂಟು ಅಂತಸ್ತಿನ buildingಗಳನ್ನು ಕಟ್ಟಿದ್ದಾರೆ. ಇವುಗಳನ್ನು ಒಡೆದು ಹಾಕುವುದಕ್ಕಾಗುವುದಿಲ್ಲ ನಿಜ. ಆದರೆ ಎಲ್ಲೋ ಒಂದು ಕಡೆ ಸರ್ಕಾರಕ್ಕೆ ರಸ್ತೆಗಳು

ಬೇಕಾದಾಗ, ನಾವು ಇದನ್ನೇನೋ confirm ಮಾಡಿ ಬಿಟ್ಟಿದ್ದೇವೆ ಎಂಧು ನಾವು ತೆಗೆದುಕೊಳ್ಳಬಾರದು ಎಂದು ಎಲ್ಲೂ ಕಾನೂನಿನಲ್ಲಿ ಇಲ್ಲ. ಅದಕ್ಕೂ ಇದು ಅನ್ವಯವಾಗುವುದಿಲ್ಲ. ಆದ್ದರಿಂದ ಇವತ್ತು ಏನಾಗಿದೆ, ತಾವು ಇದನ್ನು ತುಂಬಾ ಕೂಲಂಕಷವಾಗಿ ತಾವು ಇದನ್ನು ಪರಾಮರ್ಶೆ ಮಾಡತಕ್ಕಂಥದ್ದರಲ್ಲಿ, ಎಲ್ಲವನ್ನೂ ಕೂಡ ಅಧಿಕಾರಿಗಳಿಗೆ ತಾವು ನೀಡಿ ಬಿಟ್ಟರೆ, ಇದಕ್ಕೊಂದು ಏನಾದರೂ ಒಂದು Monitoring Committeeಯನ್ನು ಮಾಡಬೇಕಾಗುತ್ತದೆ. ಇದಕ್ಕೆ ಒಂದು Monitoring Committeeಯನ್ನು ಮಾಡದೇ ಹೋದರೆ, ಇದಕ್ಕೆ ಕಷ್ಟವಾಗುತ್ತದೆ. ಏನು ನಮ್ಮ ರಮೇಶ್‌ಕುಮಾರ್ ಸಾಹೇಬರು ಹೇಳಿದರು, NOC ಯನ್ನು ಪಡೆದು ಇವತ್ತು ಬಹುತೇಕ Apartmentಗಳನ್ನು ಮಾರಿ ಬಿಟ್ಟಿರುತ್ತಾರೆ. ಎರಡು, ಮೂರು ಅಥವಾ ನಾಲ್ಕು floor ಗಳನ್ನು unauthorise ಆಗಿ ಹಾಕಿರುತ್ತಾರೆ. ಅದನ್ನು ತಾವು ಯಾವ ರೀತಿಯಾಗಿ consider ಮಾಡುತ್ತೀರಿ? 50% ಅನ್ನು ತಾವು ಮಾಡಿಬಿಟ್ಟು, ಕಟ್ಟಡ ಕಟ್ಟಿರತಕ್ಕಂಥ constructionನಲ್ಲಿ FAR ತೆಗೆದುಕೊಳ್ಳುತ್ತೀರಾ ಅಥವಾ set back ನಲ್ಲಿ ನೀವು 50% ತೆಗೆದುಕೊಳ್ಳುತ್ತೀರಾ?

ಡಾ : ವಿ.ಎಸ್. ಆಚಾರ್ಯ : ಎರಡೂ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಸೋಮಣ್ಣ : ಎರಡನ್ನೂ ತಾವು ತೆಗೆದುಕೊಂಡಾಗ, ಅದಕ್ಕೆ ಏನೋ 50% ಎಂದರೆ, ಯಾವುದರಲ್ಲಿ ಮಾಡಬಹುದು ಎಂದರೆ, ಸ್ವಲ್ಪ ಸ್ವಲ್ಪ changes ಇದ್ದರೆ ಮಾಡಬಹುದು, 3,4 ಅಥವಾ 5 floorಗಳನ್ನು unauthorise ಆಗಿ ಕಟ್ಟಿದ್ದರೆ, ಅವುಗಳನ್ನು ತಾವು ಯಾವ ರೀತಿಯಾಗಿ ಮಾಡುತ್ತೀರಿ? Basement ಅನ್ನು ಏನಾಗಿ ತಾವು treat ಮಾಡುತ್ತೀರಿ? ಒಂದು Basement ಅನ್ನು ತೆಗೆದುಕೊಂಡರೆ ಸನ್ಮಾನ್ಯ ಆಚಾರ್ಯ ಸಾಹೇಬರೇ, ಇಡೀ building ನಿಮ್ಮ 50% deviation ಆಗಿ ಹೋಗುತ್ತದೆ. ಇದಕ್ಕೆ fine ಅನ್ನು ತಾವು nominal ಆಗಿ ಏನಾದರೂ ಮಾಡಿದರೆ, ಅದನ್ನು ಎಲ್ಲರೂ ಕಟ್ಟಿಕೊಳ್ಳುತ್ತಾರೆ. ಇದು ಮುಂದೆಯೂ ಕೂಡ ನಡೆದುಕೊಂಡು ಹೋಗುತ್ತದೆ. ಇದಕ್ಕೊಂದು ಸರಿಯಾದ ಜವಾಬ್ದಾರಿಯನ್ನು ವಿಶೇಷವಾಗಿ ನೀವು commercial ಗೆ ನೀವು construction cost ಏನಿದೆ, ಆ cost ನಲ್ಲಿ ಎಷ್ಟು ಮಾಡಬೇಕು ಎನ್ನುವುದನ್ನು ತಾವು ಮತ್ತೆ ಚಿಂತನೆ ಮಾಡಬೇಕಾಗುತ್ತದೆ. ಇದಲ್ಲದೆ, ನಕ್ಷೆಗೆ ಮಂಜೂರಾತಿಯನ್ನು ತೆಗೆದುಕೊಳ್ಳುತ್ತಾರೆ. ಮಂಜೂರಾತಿಯನ್ನು ತೆಗೆದುಕೊಂಡು ಮೂರು floorಗಳನ್ನು ಕಟ್ಟುತ್ತಾರೆ. ಕಟ್ಟಿ ಬಿಟ್ಟು ಎಲ್ಲಾ ತೋರಿಸುತ್ತಾರೆ. ಎಲ್ಲಾ ಆದಮೇಲೆ ಒಂದು NOC ತೆಗೆದುಕೊಳ್ಳುತ್ತಾರೆ. NOC ತೆಗೆದುಕೊಂಡು ಅವರು ಇನ್ನೂ ಮೂರ್‍ನಾಲ್ಕು floorಗಳನ್ನು ಹಾಕುತ್ತಾರೆ. ಇದು ಸತ್ಯವಾದ ಮಾತು ಇದು

ನಡೆದಿರತಕ್ಕಂಥದ್ದು. ಬನ್ನಿ ನಿಮ್ಮನ್ನು ಎಲ್ಲಿಗೆ ಬೇಕಾದರೂ ಕರೆದುಕೊಂಡು ಹೋಗುತ್ತೇನೆ. ಅದು ಕೇವಲ ನಮ್ಮ ಕಡೆಗೆ ಮಾತ್ರವಲ್ಲ, ವಿಶೇಷವಾಗಿ ಇವತ್ತು ಬೆಂಗಳೂರು ನಗರದಲ್ಲಿ ಇದೊಂದು ದೊಡ್ಡ ದಂಧೆಯಾಗಿದೆ. ಇಂತಹ ದಂಧಗೆ ಇವತ್ತು ತಾವೇನು ಮೋಕ್ಷ ಕಾಣಿಸಬೇಕೆಂದು ಇದ್ಧೀರಿ, ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಒಂದು ಏನು ಆಗುತ್ತದೆ ಎಂದರೆ, ಹಾಗೆ ಮೋಕ್ಷ ಕಾಣಿಸತಕ್ಕಂಥ ಸಂದರ್ಭದಲ್ಲಿ ನೂರೆಂಟು hurdles ಗಳಿವೆ, ದೊಡ್ಡ ದೊಡ್ಡ ತಿಮಿಂಗಿಲಗಳಿವೆ. ಯಾವ ರೀತಿಯಲ್ಲಿ ತಾವು ಇದನ್ನು ಬೇಧಿಸುತ್ತೀರಿ? ಎಲ್ಲವನ್ನೂ ಕೂಡ ತಾವು ಅಧಿಕಾರಿಗಳಿಗೆ ಪೂರ್ತಿಯಾಗಿ ಕೊಟ್ಟರೆ, ಆ ಸಂಬಂಧಪಟ್ಟ AE, JE ಮತ್ತು AEE ಗಳೇನು ಇರುತ್ತಾರೋ, ಇವರೇ ಹೊಣೆಗಾರರಾಗುವುದಿಲ್ಲ. ಇದಕ್ಕೆ responsibility ಯನ್ನು fix ಮಾಡಬೇಕಾಗುತ್ತದೆ. ಇದಕ್ಕೆ responsibility ಯನ್ನು ತಾವು fix ಮಾಡದೆ ಹೋದರೆ ಕಷ್ಟವಾಗುತ್ತದೆ. ಯಾರ ಮೇಲಾದರೂ ತಾವು responsibility ಯನ್ನು fix ಮಾಡಬೇಕಾಗುತ್ತದೆ. ಆ ಸಂಬಂಧಪಟ್ಟಂತಹ Head of the Department ಯಾರಿರುತ್ತಾರೋ, Executive Engineerರವರು ಮತ್ತು ಆ ಮಟ್ಟದವರು, ಅವರ ಮೇಲೆ fix ಮಾಡಬೇಕಾಗುತ್ತದೆ. ಇವತ್ತು ಸನ್ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ, unauthorized builiding 6-7 floors ಹಾಕಿರುತ್ತಾರೆ, ಎಲ್ಲವೂ ಕೂಡ assessment ಮಾಡಿರುತ್ತಾರೆ, ಖಾತೆ-ಕಂದಾಯಗಳನ್ನು ಮಾಡಿರುತ್ತಾರೆ. ಇಂತಹದ್ದು ನೂರೆಂಟು ಇವೆ. ಆದ್ದರಿಂದ ಇದೆಲ್ಲವನ್ನೂ ಕೂಡ ತಲೆಗೆ ಹೊತ್ತುಕೊಂಡು ಸನ್ಮಾನ್ಯ ಕುಮಾರಸ್ವಾಮಿಯವರ ಸರ್ಕಾರದಲ್ಲಿ ಎಲ್ಲೋ ಒಂದು ಕಡೆ ಇದಕ್ಕೆ ಕೆಟ್ಟ ಹೆಸರು ಬರುವುದಕ್ಕೆ ಅವಕಾಶವನ್ನು ತಾವು ಮಾಡಿಕೊಡದಂತೆ ಇದಕ್ಕೆ ಯಾವ ರಿತಿಯಾಗಿ ಜಾಗರೂಕತೆಯನ್ನು ತಾವು ವಹಿಸಬೇಕು ಎನ್ನುತ್ತೀರೋ ಅದನ್ನು ವಹಿಸಬೇಕಾಗುತ್ತದೆ. ಈ ಕಟ್ಟಡಗಳನ್ನು ಕಟ್ಟಿರತಕ್ಕಂಥದ್ದಕ್ಕೆ ಒಂದು cut off date, ಇಂತಿಷ್ಟು ದಿನದಲ್ಲಿ ಆಗದೇ ಹೋದರೆ, ಇನ್ನು ಮುಂದಕ್ಕೆ ಏನಾದರೂ ಒಂದೇ ಒಂದು ಕೂಡ unauthorized ಬಂದರೆ, ಸಂಬಂಧಪಟ್ಟಂತಹ ಅಧಿಕಾರಿಗಳು ಯಾರಿದ್ದಾರೆ, ಆ Executive Engineer level ನವರೆಗೂ ಕೂಡ, ಅವರನ್ನು ನಾವು ದಂಡಿಸತಕ್ಕಂಥ ಒಂದು ಕಾನೂನನ್ನು ಮಾಡಬೇಕಾಗುತ್ತದೆ. ಆ ರೀತಿಯಾಗಿ ದಂಡಿಸತಕ್ಕಂಥ ಕಾನೂನನ್ನು ಮಾಡದೇ ಹೋದರೆ ಕಷ್ಟವಾಗುತ್ತದೆ. ಆದ್ದರಿಂದ ತಾವು ದಯವಿಟ್ಟು Basement, Fine, Responsibility, Monitoring Committee ಈ ನಾಲ್ಕನ್ನೂ ಕೂಡ ತಾವು ಜಾಗರೂಕತೆಯಿಂದ

ಮಾಡಬೇಕಾಗುತ್ತದೆ. ಅದ್ದರಿಂದ ಇದನ್ನು ದಯವಿಟ್ಟು, ಅಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಎಸ್.ಎಂ. ಕೃಷ್ಣರವರೇ ಇದಕ್ಕೆ ಒಂದು ಕಮಿಟಿ ಮಾಡಿರುವುದರಿಂದ, ಇದಕ್ಕೊಂದು ಮೋಕ್ಷ ಕಾಣಿಸಬೇಕಾಗಿರುವುದರಿಂದ ದಯವಿಟ್ಟು ಇದನ್ನು ತಾವು ಮಾಡುವಾಗ, ಇದರ ಸಾಧ್ಯಾ ಸಾಧ್ಯತೆಗಳನ್ನು, ಅನಾನುಕೂಲತೆಗಳನ್ನು ಮನಗಂಡು ಮಾಡಬೇಕು. ಆಮೇಲೆ ಒಂದೇ ಒಂದು ಸನ್ಮಾನ್ಯ ಆಚಾರ್ಯರೇ, ತಮಗೆ ಮತ್ತು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಎರಡನೇಯ floorಗೆ authorize ಎಂದು ಕೊಟ್ಟಿರುತ್ತಾರೆ, Ground, First & Second FAR ನಲ್ಲಿ ಇರುತ್ತದೆ ಎಂದು 30x40 ನಲ್ಲಿ ತೆಗೆದುಕೊಳ್ಳುತ್ತಾರೆ, staircase ಅನ್ನು ಒಳಗಡೆ ಹಾಕಿಕೊಂಡು, ಯಾವನಾದರೂ ಮರ್ಯಾದೆ ಇರತಕ್ಕಂಥವನು ಒಂದೇ ಕುಟುಂಬ ಮಾಡಿಕೊಳ್ಳಬೇಕು ಎಂದು ಮಾಡಿದರೆ, staircase roomಗೆ ಒಯ್ಯುತ್ತಾರೆ. ಇಲ್ಲಿ ನೂರಕ್ಕೆ ಇನ್ನೂರ ಪಟ್ಟು unauthorise ಮಾಡಿರತಕ್ಕಂಥದ್ದಕ್ಕೆ ನಾನು ಹೇಳುತ್ತಿದ್ದೇನೆ. ಯಾರು ಕಾನೂನು ಪರಿಮಿತಿಯಲ್ಲಿ ಕಟ್ಟಿರುತ್ತಾರೆ, ಆ ಕಾನೂನಿನ ಪರಿಮಿತಿಯಲ್ಲಿ ಇರತಕ್ಕಂಥವರಿಗೇ ದಂಡ ಹಾಕುವುದು, ತೊಂದರೆ ಕೊಡುವುದು, influence ಮಾಡಿಸುವುದು ಆಗುತ್ತದೆ. ಆದ್ದರಿಂದ ಮೂರನೇ floor ನಲ್ಲಿ ಹಾಕತಕ್ಕಂಥ staircase room ಏನಿದೆ, ಅದನ್ನು ಇದರಿಂದ ಹೊರತುಪಡಿಸಲಿಕ್ಕೂ ಕೂಡ ತಾವು ಚಿಂತನೆ ಮಾಡಬೇಕಾಗುತ್ತದೆ. ಇಂತಹ ನೂರೆಂಟು ನ್ಯೂನತೆಗಳು ಇದ್ದರೂ ಕೂಡ, ಬೆಂಗಳೂರು ನಗರದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಇವತ್ತೇನು ಈ unauthorized constructionಗೆ ಒಂದು ಮೋಕ್ಷ ಕಾಣಿಸಬೇಕು ಎಂದಿದೆ ಸರ್ಕಾರದಲ್ಲಿ ಎಲ್ಲೋ ಒಂದು ಕಡೆ ಕೋರ್ಟ್‌ನ ಆದೇಶಗಳು ಮತ್ತೊಂದು, ಮಗದೊಂದು, ಪದೇ ಪದೇ ಎಲ್ಲೋ ಒಂದು ಕಡೆ ಸರ್ಕಾರಕ್ಕೂ ಕೂಡ ಎಚ್ಚರಿಕೆ ವಹಿಸುವುದರಿಂದ, ತಾವು 25–50% ಏನಿದೆ, ನೀವು ಏನು unauthorized ಏನು ಇವತ್ತು 20X30, 30X40 40X60 ರಲ್ಲಿ ಯಾರು ಕಟ್ಟಿರುತ್ತಾರೋ, ಬಡವರು ಮತ್ತು ಮಧ್ಯಮವರ್ಗದವರು, ಇವರಿಗೆ ಅನಾನುಕೂಲ ಆಗದ ಹಾಗೆ, ಅವರಿಗೆ ಒಂದು ರೀತಿ fine ಹಾಕಬೇಕಾಗುತ್ತದೆ, Commercial ನವರಿಗೆ ಮತ್ತು Apartment ನವರಿಗೆ ಮತ್ತೊಂದು ರೀತಿ fine ಹಾಕಬೇಕಾಗುತ್ತದೆ. ಇದನ್ನು ತಾವು ಚಿಂತನೆ ಮಾಡಿ, rule ಅನ್ನು ಮಾಡುವಾಗ, ಇದಕ್ಕೆ ಸರಿಯಾದ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಭೆ ಮೂಲಕ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎ. ಕೃಷ್ಣಪ್ಪ (ವರ್ತೂರು) : ಮಾನ್ಯ ಸಭಾಧ್ಯಕ್ಷರೆ, ಇದರಲ್ಲಿ ಒಂದೆರಡು ಅವರ ಗಮನಕ್ಕೆ ತರುವುದೇನೆಂದರೆ, Retrospectivedate ನಿಂದ ಅನ್ವಯಿಸುವಂತೆ ಈ Bill ತಂದಿರುವುದರಿಂದ officers ಗೆ ಒಳ್ಳೆಯ ರಕ್ಷಣೆ ಕೊಟ್ಟಂತಾಯಿತು. ಅವರು ಎಲ್ಲಾದಕ್ಕೂ ಶಾಮೀಲಾಗಿ ಏನು ಇವತ್ತು ಈ ದಂಧೆ, ನಡೆದಿದೆ, ಬೆಂಗಳೂರು ಹಾಗೂ ಆಜುಬಾಜು ಬೇರೆ ಪಟ್ಟಣಗಳಲ್ಲಿ, ಅದನ್ನು Now, officially we are regularizing. ಅಂದರೆ ಅವರು ಮಾಡಿದಂತಹ ತಪ್ಪುಗಳನ್ನೆಲ್ಲ ಈ ಒಂದು ತಿದ್ದುಪಡಿ ಮುಖಾಂತರ ಕ್ಷಮೆ ಮಾಡಿದಂತಾಯಿತು. ಇವತ್ತು ಇದನ್ನು ನೀವು retrospective date ಅಥವಾ prospective date ನಿಂದ ತರುತ್ತಿದ್ದೀರೋ ನನಗೆ ಗೊತ್ತಿಲ್ಲ. ಯಾವ್ಯಾವ ಬಾಬತ್ತಿಗೆ ಏನು value fix ಮಾಡಿದ್ದಾರೆ ಎಂದು ಇದರಲ್ಲಿ ಇಲ್ಲ. ಇದೆಲ್ಲಾ ವಿವರಗಳು ಯಾವುದೂ ಇಲ್ಲದೆ, ನನಗೆ ಗೊತ್ತಿದ್ದಂತೆ, Country Town Planning Act ಪ್ರಕಾರ 5% ಗಿಂತ ಮೇಲಿನ Tolerance ಅನ್ನು Accept ಮಾಡಿಕೊಂಡಂತಹ ರಾಜ್ಯದ ಸರ್ಕಾರಗಳ ಕಾನೂನುಗಳಿಲ್ಲ. ಇಲ್ಲಿ ಬಹಳ ದೊಡ್ಡ ಮನಸ್ಸು ಮಾಡಿ, ವಿಶಾಲವಾದ ಹೃದಯವನ್ನು ಇಟ್ಟುಕೊಂಡು 25–50% ಕ್ಕೆ ತಂದಿದ್ದಾರೆ, ಇನ್ನೇನು 25–50% ಆದಮೇಲೆ ಉಳಿದಿರತಕ್ಕಂಥದ್ದು ಎಷ್ಟು? ಇನ್ನು 50% ಭಾಗ ಮಾತ್ರ. ಅದನ್ನೂ ಕೂಡ ಸೇರಿಬಿಡಿ. ಇದು ಹೇಗೆ ಸಾಧ್ಯ ಮಾನ್ಯ ಸಭಾಧ್ಯಕ್ಷರೆ? ನಾಳೆ ಕಾನೂನಿಗೆ ಏನಾದರೂ ಬೆಲೆ ಇರುತ್ತದೆಯೇ ಅಥವಾ ನೀವು ನಿಯಮಾವಳಿಗಳ ಪ್ರಕಾರ ಕೆಲಸ ನಡೆಯಬೇಕು, ಸಾರ್ವಜನಿಕರ ಹಿತ ಕಾಪಾಡಬೇಕು ಎಂದೇನಾದರೂ ಸರ್ಕಾರಕ್ಕೆ ಇಷ್ಟ ಇದ್ದರೆ, ಅದು ಹೇಗೆ ಮಾಡಲಿಕ್ಕೆ ಆಗುತ್ತದೆ? Officer ಗಳು ಕಣ್ಣಿನಲ್ಲಿ ಕಣ್ಣು ಇಟ್ಟುಕೊಂಡು, ಒಂದೊಂದು ಕಂಬಕ್ಕೆ, ಒಂದೊಂದು ಕಂಬಿಗೆ Officers ಗಳನ್ನು post ಮಾಡಿ. ಇವರ ಇಷ್ಟೊಂದು ಕಟ್ಟಡಗಳನ್ನು ಕಾನೂನುಬಾಹಿರವಾಗಿ ಕಟ್ಟಿದ್ದಾರೆ. ಇಂಥದ್ದನ್ನು ನಾವು ರೆಗ್ಯುಲರೈಸ್ ಮಾಡುತ್ತೇವೆಂದರೆ You are supporting the action of the officers who have colluded with them and who are responsible for such kind of disater in the construction activity. ಅದಕ್ಕೆ ನೀವು ರೆಗ್ಯುಲರೈಸ್ ಮಾಡುತ್ತೇವೆಂದರೆ ನಾವು ಒಪ್ಪಿ ಕೊಳ್ಳುವುದಕ್ಕೆ ಆಗುವುದಿಲ್ಲ. ಇದರ ಮೇಲೂ ನಾವು ಸರ್ಕಾರದವರಿದ್ದೇವೆ, ನಾವೂ ಮಾಡೇ ಮಾಡುತ್ತೇವೆ, ನೀನೇನು ಹೇಳುವುದು ಎಂದರೆ ಅದು ನಿಮಗೆ ತೋಚಿದ್ದು ಅಷ್ಟೇ. ಏಕೆಂದರೆ ಇದರಲ್ಲಿ ಹಣ ವಸೂಲು ಮಾಡುವ ವಿಚಾರದಲ್ಲಿ ಮೂರೋ, ನಾಲ್ಕೋ ಕ್ಯಾಟಗರಿ ಮಾಡಬೇಕಾಗುತ್ತದೆ. ಸಾಮಾನ್ಯ ಮನುಷ್ಯ ನಮ್ಮ ರಮೇಶ್ ಕುಮಾರ್‌ರವರು ಹೇಳಿದ ಹಾಗೆ 40 ಇಂಟು 30 ನಿವೇಶನದಲ್ಲಿ

ಯಾವನಾದರೂ ಮನೆ ಕಟ್ಟಿಕೊಂಡಿರುತ್ತಾನೆ, ಅದರಲ್ಲಿ ಪೋರ್ಟಿಕೋ ಸ್ವಲ್ಪ ಮುಂದೆ ಬಂದಿರುತ್ತದೆ, ಇಲ್ಲದೇ ಹೋದರೆ ಸ್ಟೇರ್ ಕೇಸ್ ಏನಾದರೂ ಒಂದೆರಡು ಅಡಿ ಮುಂದೆ ಬಂದಿರುತ್ತದೆ, ಅವನಿಗೂ ಒಂದೇ ಫೆನಾಲ್ಟಿ ಆಗುತ್ತದೆ, ಕಮರ್ಶಿಯಲ್‌ನವರಿಗೂ ಒಂದೇ ಫೆನಾಲ್ಟಿ ಆಗುತ್ತದೆ, ಅಪಾರ್ಟ್‌ಮೆಂಟ್ಸ್‌ಗಳು ನನ್ನ ಕ್ಷೇತ್ರದಲ್ಲಿಯೇ ಪಬ್ಲಿಕ್ ಆಗಿ ಹೇಳಬೇಕೆಂದರೆ ತೆಗೆದುಕೊಂಡಿರುವುದು ಮೂರು, ಕಟ್ಟಿರುವುದು ಆರು. ತೆಗೆದುಕೊಂಡಿರುವುದು ನಾಲ್ಕು, ಕಟ್ಟಿರುವುದು ಏಳು ಈ ರೀತಿಯವುಗಳು ಬೇಕಾದಷ್ಟು ಇವೆ. ನಮ್ಮ ರಾಮಸ್ವಾಮಿ ಸಮಿತಿಯವರು ಪೂರ್ವ ತಾಲ್ಲೂಕಿನಲ್ಲಿ ಅವರು ಪ್ರಯಾಣ ಮಾಡಿ ಈಗಾಗಲೇ ಬೇಕಾದಷ್ಟು ಪಟ್ಟಿ ಮಾಡಿದ್ದಾರೆ. ಅದಕ್ಕಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ, ಇದರ ಬಗ್ಗೆ ಸಮಗ್ರವಾಗಿ ಡಿಸ್‌ಕಶನ್ ಆಗಲಿ, ಆಮೇಲೆ ಇದು how far it is going to help the future activity ಎನ್ನುವುದು ಒಂದು, ಇನ್ನು ರೆವಿನ್ಯೂ ಹೆಚ್ಚು ಆಗುವುದಕ್ಕೆ ಇದು ಹೇಗೆ ಸಹಾಯವಾಗುತ್ತದೆ ಎನ್ನುವುದೂ ಒಂದು ವಿಚಾರವಿದೆ, ಒಟ್ಟಾರೆ ಇವೆಲ್ಲವೂಗಳನ್ನು ಗಣನೆಗೆ ತೆಗೆದುಕೊಂಡು ನಾವು ಬೇಕಾದರೆ ತೀರ್ಮಾನ ಮಾಡಬಹುದು. ನೀವು ಏಕಾಏಕಿ ಇದನ್ನು ತರಬೇಡಿ. ನಿಮ್ಮ ಹತ್ತಿರ ಮಾಹಿತಿಗಳು ಬೇಕು, ಎಷ್ಟು ಇಂಥ ಕಟ್ಟಡಗಳು ಇವೆ, ನಿಮ್ಮ ಹತ್ತಿರ ಏನು ಪುರಾವೆಗಳು ಇವೆ, in the absence of everything ನೀವು ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿ ಲಾಸ್ಟ್ ಮಿನಿಟ್‌ನಲ್ಲಿ ಈ ರೀತಿ ಪಾಸ್ ಮಾಡುವುದು ಸರಿಯಲ್ಲ. ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್‌ರವರು ಮತ್ತು ಮಾನ್ಯ ಖರ್ಗೆಯವರು ಡೈನಿಂಗ್ ಹಾಲ್‌ನಲ್ಲಿ ಒಂದು ಮಾತನ್ನು ಹೇಳಿದರು. ಈಗ we have to close today's session with a happy note ಎಂದು ಹೇಳಿದರು. ಒಂದು ಸಂತೋಷದಲ್ಲಿ ಇವೊತ್ತಿನ ವಿಧಾನಸಭೆ ಮುಕ್ತಾಯ ಆಗಬೇಕು, ಇವೊತ್ತು ಯಾವುದೇ ರೀತಿಯಲ್ಲಿ walk in, walk out ಮಾಡುವುದು ಯಾವುದೂ ಬೇಡವೆಂದು ಹೇಳಿದರು. ಆದರೆ ಇವೊತ್ತು ಇಂಥ ಬಿಲ್‌ನ್ನು ನೀವು ಕಡೇ ಘಳಿಗೆಯಲ್ಲಿ ತಂದು ಈ ಇರಿಟೇಶನ್‌ನ್ನು ನಾವು ಕ್ಯಾರಿ ಮಾಡಿಕೊಂಡು ಬೆಳಗಾಂನಿಂದ ಬೆಂಗಳೂರಿಗೆ ನಾವು ಪ್ರಯಾಣ ಮಾಡುವುದು ಬೇಡ. If you are so serious, please bring it after detalled discussion and summon for the meeting of all those who are concerned. Prime cities ಯಾವು ಯಾವುದಿವೆ, ಅವರನ್ನು ಕರೆಯಿರಿ ನಿಮ್ಮ ಛೇಂಬರ್‌ನಲ್ಲಿ, ಅರ್ಧರ್ಧ ಘಂಟೆ ಚರ್ಚೆಯಾಗಲಿ, ಏನೀಗ ಅದರಲ್ಲಿ, pDeliberations will give you good results In the absence of deliberations, there is no good result.

ಅದಕ್ಕೆ ನಾಳೆ ಇಲ್ಲಿ ಬಿಲ್ ತಂದು ನೀವು ಇಲ್ಲಿಟ್ಟರೆ ಒಂದೇ ಸೆಕೆಂಡ್‌ಗೆ ಪಾಸ್ ಮಾಡಿಕೊಡುತ್ತಾರೆ. Because, ಪಟ್ಟಣಗಳನ್ನು ಪ್ರತಿನಿಧಿಸುವವರು ಎಲ್ಲರೂ ಕೂಡ ಈಗಾಗಲೇ ನಿಮ್ಮ ಹತ್ತಿರ ಮಾತನಾಡಿ ಏನೇನು ಸಲಹೆ ಸೂಚನೆಗಳನ್ನು ಕೊಟ್ಟು ವ್ಯಾಲ್ಯುವೇಶನ್ಸ್ ಹೇಗೆಗೆ ಮಾಡಬೇಕು ಎಂಬುದನ್ನೆಲ್ಲಾ ನಾವುಗಳು ಮನಸ್ಸಿಟ್ಟು ಮಾಡಿದಾಗ, ತದನಂತರ ಅದು ಅಸೆಂಬ್ಲಿಗೆ ಬಂದರೆ , ಅದು ಮೂರು ನಿಮಿಷದಲ್ಲಿ ಪಾಸ್ ಆಗುತ್ತದೆ. ಅದನ್ನು ಬಿಟ್ಟು ನೀವು ಮಾಡೇ ಮಾಡುತ್ತೇವೆಂದರೆ ಅದು ತಮಗೆ ಬಿಟ್ಟಿದ್ದು.

ಶ್ರೀ ಎ. ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಂದಿರುವಂಥ ಈ ಮಸೂದೆ, ಅದನ್ನು ಹಿಂದಿನ ಸರ್ಕಾರ ತಂದದ್ದಾಗಲೀ ಅಥವಾ ಈ ಸರ್ಕಾರ ಅದಕ್ಕೆ ಮಾನ್ಯ ರಾಜ್ಯಪಾಲರ ಟಿಪ್ಪಣಿಯ ಆಧಾರದ ಮೇಲೆ ಕೆಲವೊಂದು ಬದಲಾವಣೆಯನ್ನು ಮಾಡಿ ತಂದಿರುವಂಥದ್ದನ್ನು ನೋಡಿದರೆ ಬಹುಶಃ ಉದ್ದೇಶಗಳು ಒಳ್ಳೆಯದಾಗಿದ್ದರೂ ಇದರ ಹಿಂದೆ ಸಾಕಷ್ಟು ಅನಾಹುತಗಳಿವೆ. ಅದನ್ನು ನಾನು ಉದಾಹರಣೆಯ ಮೂಲಕ ನಾನು ಹೇಳುವುದಾದರೆ, ರಾಜ್ಯದಲ್ಲಿರುವಂಥ 214 ಮುನಿಸಿಪಾಲಿಟಿಗಳಾಗಿರಬಹುದು ಅಥವಾ 8 ನಗರಪಾಲಿಕೆಯ ವ್ಯಾಪ್ತಿಯಲ್ಲಿ ಬರಬಹುದು, ರಾಜ್ಯದ ಎಲ್ಲೆಡೆ ಅನಧಿಕೃತ ಬಡಾವಣೆಗಳು ಇವೊತ್ತು ತಲೆ ಎತ್ತಿವೆ. ಆ ಅನಧಿಕೃತ ಬಡಾವಣೆಗಳಲ್ಲಿ ಬಡವರು ಏನು ವಾಸ ಮಾಡುತ್ತಿದ್ದಾರೆ ಅಲ್ಲಿ ರಸ್ತೆಗಳಿಗೆ ಜಾಗ ಬಿಟ್ಟಿಲ್ಲ ಅಥವಾ ಬೇರೊಂದಕ್ಕೆ ಜಾಗವನ್ನು ಬಿಟ್ಟಿಲ್ಲ, ಈ ಹಿಂದೆಯೂ ಸಹ ನಾವು ಇದೇ ವಿಚಾರದಲ್ಲಿ ಹಿಂದಿನ ಸರ್ಕಾರದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದ ಮಾನ್ಯ ಡಿ.ಕೆ. ಶಿವಕುಮಾರ್‌ರವರಿಗೆ ಇದೇ ಮಾತನ್ನು ಹೇಳಿದ್ದೆ. ಇದರಲ್ಲಿ ಶೇ 50ರಷ್ಟು ನಾವು ಅವರಿಗೆ ರಿಯಾಯಿತಿಯನ್ನು ಕೊಡಬಹುದು ಎಂದು ಏನಿತ್ತು ಅದು ರಾಜ್ಯಪಾಲರಿಗೆ ಹೋಗಿ ಬಂದಮೇಲೆ ಅದನ್ನು ಶೇ. 25ಕ್ಕೆ ಇಳಿಸಿದಿರಿ. ನಗರಾಭಿವೃದ್ಧಿ ಇಲಾಖೆ ಈಗಾಗಲೇ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಮತ್ತು ಮುನಿಸಿಪಾಲಿಟಿಗಳಿಗೆ ಹಾಗೂ ನಗರ ಪಾಲಿಕೆಗಳಿಗೆ ಶೇ.25 ರಷ್ಟು ಏನಾದರು ವೇರಿ ಯೇಶನ್ ಇದ್ದರೆ ಆ ಬಗ್ಗೆ ಕಂಪ್ಲೀಶನ್ ರಿಪೋರ್ಟ್ ಕೊಡುವಂಥ ಆದೇಶವನ್ನು ಕೊಟ್ಟಿದ್ದೀರಿ. ಆದರೆ ಇಲ್ಲೇನಾಗುತ್ತದೆಂದರೆ, ಕೆಲವೊಂದು ಬಡಾವಣೆಗಳಲ್ಲಿ ಸರಿಯಾಗಿ ರಸ್ತೆಗಳಿಗೆ ಜಾಗವನ್ನು ಬಿಟ್ಟಿರುವುದಿಲ್ಲ. ಕೆಲವೊಂದು ಹೈರೈಸ್ ಬಿಲ್ಡಿಂಗ್‌ಗಳಲ್ಲಿ ಅವರು ಮಾಡಿರುವಂಥ ತಪ್ಪುಗಳು ಏನಿವೆ ಇದರಲ್ಲಿ ಒಂದು shield ತೆಗೆದುಕೊಳ್ಳುವಂಥ ಪರಿಸಿತಿಯನು ಮುಂದಿನ ದಿನಗಳಲಿ ನಾವು ನೋಡಬಹುದು. ಇದು ಒಂದು

ವಿಚಾರ. ಇನ್ನು ಎರಡನೇಯದಾಗಿ, ಇವೊತ್ತು ಏನು ಬಡವರಿಗಾಗಿ ಈ ಬಿಲ್ ಬಹಳ ಒಳ್ಳೆಯಯದು, ಇದು ಬರಬೇಕೆಂದು ನಾವು ಏನು ಯೋಚನೆಯನ್ನು ಮಾಡುತ್ತೇವೆ, ಆದರೆ ಇದರ ಹಿಂದೆ ಏನಿದೆ, there are so much of hidden agendas behind this Bill. ನೀವು ರೈಡರ್ ಕ್ಲಾಸ್‌ಗೆ ಎಲ್ಲಾ ಹಂತದಲ್ಲೂ ನೋಡಬೇಕಾಗುತ್ತದೆ, ಅಗ್ರಿಕಲ್ಚರ್ ಲ್ಯಾಂಡ್ ಇದ್ದರೆ ನೀವು ಮಾಡುವುದಕ್ಕೆ ಆಗುವುದಿಲ್ಲ. ರೆವಿನ್ಯೂ ಲ್ಯಾಂಡ್ ಇದ್ದರೆ ನೀವು ಮಾಡುವುದಕ್ಕೆ ಆಗುವುದಿಲ್ಲ, ಇವೊತ್ತು ಏನಾಗಿದೆಯೆಂದರೆ ಬಡವರು ಕಟ್ಟಿರುವುದು ಇದೇ ಜಾಗದಲ್ಲಿ. ನೀವು ಸರ್ಕಾರಿ ಜಾಗ, ನಿಗಮ ಮಂಡಳಿಗೆ ಸೇರಿರುವಂಥ ಜಾಗ, ಈ ಜಾಗಗಳಿಗೆ ರಕ್ಷಣೆ ಕೊಡುವುದಕ್ಕೆ ಎಷ್ಟು ಮುಂದಾಗಿದ್ದೀರೋ ಅಥವಾ ಹೆದ್ದಾರಿಗಳು ಅಥವಾ ರಿಂಗ್ ರೋಡ್ಗಳಿಗೆ ರಕ್ಷಣೆ ಕೊಡುವುದಕ್ಕೆ ನೀವು ಎಷ್ಟು ಮುಂದಾಗಿದ್ದೀರೊ, ಬಡವರಿಗೆ ಏನು ಅನುಕೂಲವಾಗಬೇಕೋ ಆ ಬಗ್ಗೆ ಬಿಲ್‌ನಲ್ಲಿ ಎಲ್ಲೂ ಇಲ್ಲ. ಆ ಕಾರಣದಿಂದ ಮುಂದೆ ನಡೆಯುವಂಥ ಅಧಿವೇಶನಗಳಲ್ಲಿ ವ್ಯಾಪಕವಾಗಿ ಚರ್ಚೆಯಾಗಿ ಈ ಬಿಲ್ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಇವೊತ್ತೇನು ಅನಧಿಕೃತ ಕಟ್ಟಡಗಳನ್ನು ರೆಸಿಡೆನ್‌ಶಿಯಲ್ ಆದರೆ ಶೇ. 50, ವಾಣಿಜ್ಯ ಆದರೆ ಶೇ. 25 ಎನ್ನುವ ತಿದ್ದುಪಡಿಗೆ ಸಂಬಂಧಪಟ್ಟ ಹಾಗೆ ಪ್ರಸ್ತಾವನೆಯಾಗಿದೆ, ಈ ಬಗ್ಗೆ ಬಹಳಷ್ಟು ವರ್ಷಗಳಿಂದ ಚರ್ಚೆಯಾಗಿದ್ದರೂ ಕೂಡ ಒಂದು ಕಡೆ ಕಾನೂನನ್ನು ಪಾಲಿಸಿ, ನಿಯಮಗಳಂತೆ ಕಟ್ಟಿರುವ ಕಟ್ಟಡಗಳ ಮಾಲೀಕರು ಹಲವಾರು ಚರ್ಚೆಗಳಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತಿದ್ದದ್ದು ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಕಾನೂನನ್ನು ಗೌರವಿಸಿ, ನಿಯಮಾವಳಿಗಳ ಪ್ರಕಾರವಾಗಿ ಸೆಟ್‌ಬ್ಯಾಕ್ ಏರಿಯಾಗಳನ್ನು ಬಿಡತಕ್ಕಂಥ ಮೂಲ ಉದ್ದೇಶ right to air and right light ಗಾಳಿ ಮತ್ತು ಬೆಳಕು ಮತ್ತು ಸುರಕ್ಷತೆಯ ದೃಷ್ಟಿಯಿಂದ ಬಿಲ್ಡಿಂಗ್ ಬೈಲಾಸ್‌ವ್ಯಾಪ್ತಿಯಲ್ಲಿ ಕಟ್ಟಿರತಕ್ಕಂಥವರು ಆತಂಕವನ್ನು ವ್ಯಕ್ತಪಡಿಸಿದ್ದದ್ದನ್ನು ಈ ಸಭೆಯಲ್ಲಿ ಮತ್ತೊಮ್ಮೆ ನಾನು ನೆನಪು ಮಾಡಿಕೊಳ್ಳಲು ಬಯಸುತ್ತೇನೆ. ಇವೊತ್ತು ಸೆಟ್ ಬ್ಯಾಕ್ ಏರಿಯಾಗಳ ವಿಷಯದಲ್ಲಿ ನಾವು ಈ ರೀತಿಯಾಗಿ ಶೇ. 50 ರಷ್ಟು ಹೋಗುವುದಾದರೆ ಬಹುಶಃ ಇತ್ತೀಚೆಗೆ ನಾವು ಮತ್ತು ಸೋಮಣ್ಣನವರು ನಮ್ಮ ಸ್ನೇಹಿತರ ಕಟ್ಟಡದ ಸಮಸ್ಯೆ ಬಗ್ಗೆ ನಾವಿಬ್ಬರೂ ಹೋಗಬೇಕಾಗಿ ಬಂತು. ಅವರು ಏನು ಮಾಡಿದ್ದರೆಂದರೆ ಅವರ ಸ್ಟೇರ್ ಕೇಸ್ ತೆಗೆದುಕೊಂಡು ಹೋಗಿ ಬೆಡ್ ರೂಂ ಹತ್ತಿರ ಇಟ್ಟಿದ್ದರು,. ನಿಯಮಾವಳಿ

ಪ್ರಕಾರವಾಗಿ ಅದು ಕಾನೂನು ಬಾಹಿರವಾಗುತ್ತದೆ. ಈ ಒಂದು ಬಿಲ್‌ನ ಕಾನೂನು ಜಾರಿಗೆ ಬಂದರೆ ಅದನ್ನು ಸಕ್ರಮಗೊಳಿಸಲು ಬರುತ್ತದೆ. ಅವರು ಹೇಳುತ್ತಿದ್ದರು. ಬಹುಶಃ ನಾವು ಕಾನೂನು ಗೌರವಿಸಿ ಸೆಟ್‌ಬ್ಯಾಕ್ ಏರಿಯಾ ಸರಿಯಾಗಿ ಬಿಟ್ಟು ಕಟ್ಟಿದ್ದರೆ ಅವರ ಸ್ಟೇರ್ ಕೇಸ್ ತೆಗೆದುಕೊಂಡು ಬಂದು ನಮ್ಮ ಬೆಡ್‌ರೂಂ ಪಕ್ಕದಲ್ಲಿದ್ದರೆ ಹೋಗೋ ಬರೋರೆಲ್ಲರೂ ನಮ್ಮ ಬೆಡ್‌ರೂಂ ನೋಡಬೇಕೆ , ಬಾತ್‌ರೂಂ ನೋಡಬೇಕೆ ಎನ್ನುತ್ತಿದ್ದರು. ದಯವಿಟ್ಟು ಒಂದನ್ನು ನಾವು ಯೋಚನೆ ಮಾಡಬೇಕಾಗುತ್ತದೆ, ನಾವು ದೂರದೃಷ್ಟಿಯನ್ನಿಟ್ಟುಕೊಂಡು ಈ ಕಟ್ಟಡ ನಿಯಮಾವಳಿಗಳನ್ನು ಮಾಡಿರತಕ್ಕಂಥ ಮೂಲ ಉದ್ದೇಶ, ನಮ್ಮ ಮಾನ್ಯ ಕೃಷ್ಣಪ್ಪನವರು ಹೇಳಿದ ಹಾಗೆ ಈ ಒಂದು 50% ಈ ರೀತಿ ರ್‍ಯಾಟಿಫಿಕೇಶನ್ಸ್‌ನ್ನು ಮತ್ತ ಸಮೀಕರಣ ಮಾಡತಕ್ಕಂಥದ್ದು ಮತ್ತು tpe ಕೊಟ್ಟು ಒಂದೂವರೆ ಪಟ್ಟು ಕಟ್ಟಲಿಕ್ಕೆ, ಎರಡೂ ಆಗಿಬಿಟ್ಟರೆ ಬಹುಶಃ ಹೇಳುತ್ತೇನೆ, ಯಾರು ಯಾರು ಕಾನೂನು ಬಾಹಿರವಾಗಿ ಅಕ್ರಮವಾಗಿ ಕಟ್ಟಿರುತ್ತಾರೆ ಅದನ್ನು ಇವರು ಇವೊತ್ತು ಹೇಳಿದ ಹಾಗೆ ಸಂಪೂರ್ಣವಾಗಿ ಸಕ್ರಮದಂತಾಗುತ್ತದೆ. ಆದುದರಿಂದ ಇದರ ಬಗ್ಗೆ ಡೀಪ್ ಆಗಿ ಚರ್ಚೆ ಆಗಬೇಕಾಗುತ್ತದೆ. ಗ್ರಾಸ್ ರೂಟ್ ಲೆವೆಲ್‌ನಲ್ಲಿ, ಪಟ್ಟಣ ಪಂಚಾಯತಿಯಲ್ಲಿ, ಉಡುಪಿಯಲ್ಲಿ ಕೆಲಸ ಮಾಡತಕ್ಕಂಥ ಆಚಾರ್ಯರವರು ಇಂಥ ಸಮಸ್ಯೆಗಳನ್ನು ಎದುರಿಸಿರಬಹುದು ಎಂದು ನಾನು ಭಾವಿಸುತ್ತೇನೆ. ಬಹುಶಃ ಉದ್ದೇಶ ಏನಿದೆ, ಸೆಟ್ ಬ್ಯಾಕ್ ಏರಿಯಾದಲ್ಲಿ ಒಂದು ಅಡಿ, ಎರಡಡಿ ಹೋಗಿರುತ್ತಾರೆ ಎಂದುಕೊಂಡಿರುತ್ತೇವೆ. ಯಾವ ಬಿಲ್ಡಿಂಗ್ ಲೈನ್‌ನ್ನು ಕಮರ್ಶಿಯಲ್ ಏರಿಯಾದಲ್ಲಿ ಇವೊತ್ತು ಫಾಲೋ ಮಾಡಿದ್ದಾರೆ ಹೇಳಿ. ನಾವು ಆತ್ಮ ವಿಮರ್ಶೆ ಮಾಡಿಕೊಳ್ಳೋಣ. ಬಹುಶಃ ಈ ಬಗ್ಗೆಯೂ ಕೂಡ ಸಮಗ್ರವಾಗಿ ಚಿಂತನೆ ಮಾಡಬೇಖು. ಬಹುಶಃ ಬೆಂಗಳೂರಿನಲ್ಲಿ ಹೆಚ್.ಯು.ಡಿ. ನಲ್ಲಿ ಇವೊತ್ತು ಬಿಲ್ಡಿಂಗ್ಸ್ ಎಷ್ಟು ಡೆಮಾಲಿಶ್ ಆಗಬೇಕೆಂಬುದರ ಬಗ್ಗೆ ಎಷ್ಟು ಕಡತಗಳು ಪೆಂಡಿಂಗ್ ಇವೆ ಎಂಬುದು ನಮಗೂ ಗೊತ್ತಿದೆ. ಆದುದರಿಂದ ಇವುಗಳ ಬಗ್ಗೆಯೆಲ್ಲಾ ಸಮಗ್ರವಾಗಿ ಚರ್ಚೆ ಮಾಡಲು ಅವಕಾಶ ಕೊಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ಬಹುಶಃ zonal regulationಗಳನ್ನು violation ಆಗಿ total deviation ಆಗಿ ಇವೊತ್ತು ಬೆಂಗಳೂರು ನಗರದಲ್ಲಾಗಲಿ ಅಥವಾ ಯಾವುದೇ ನಗರಗಳಲ್ಲಾಗಲೀ ರಸ್ತೆಗಳಲ್ಲಿ ಸಮಚಾರ ಮಾಡುವುದಕ್ಕೆ ಆಗುವುದಿಲ್ಲ. ಇವೊತ್ತು ಪಾರ್ಕಿಂಗ್ ಬಗ್ಗೆ ತಾವು ಹೇಳಿದ್ದೀರಿ. ಆದರೆ ಒಂದು ಬಹಳ ಪ್ರಾಮಾಣಿಕವಾಗಿ ನಾವು ಹೇಳಬೇಕಾಗುತ್ತದೆ. ಇವೊತ್ತು ಬೇಕಾದರೆ ನಾವು horizontal ಆಗಿ ಹೋಗುವುದಕ್ಕೆ ಅವಕಾಶ ಕೊಡಬಹುದೇ ಹೊರತು ಈ

ಸೆಟ್ ಬ್ಯಾಕ್ ಏರಿಯನಲ್ಲಿ, ಉದಾಹರಣೆಗೆ ಒಂದು fire accident ಆಯಿತು ಎಂದಿಟ್ಟುಕೊಳ್ಳೋಣ, ಹೇಗೆ ಅದನ್ನು ನಿಭಾಯಿಸುತ್ತೀರಿ? ಇವೊತ್ತು. ನಿಮಗೆ ಗೊತ್ತಿದೆ, ನಮ್ಮ ಬೆಂಗಳೂರಿನ ಹೃದಯ ಭಾಗವಾದ ಗಾಂಧಿನಗರ ಕ್ಷೇತ್ರದಲ್ಲಿ ಇವೊತ್ತು, ಕಮರ್ಶಿಯಲ್ ಆಗಿ ಹಾಂಕಾಂಗ್ ಬಜಾರ್, ಬರ್ಮಾ ಬಜಾರ್‌ಗಳು ಆಗಿವೆ. ನೀವು ಇದನ್ನೆಲ್ಲಾ ಕೊಟ್ಟಾಗ ಒಂದು ಬೆಂಕಿ ಅನಾಹುತವಾದರೆ ಒಳಗಡೆ ಹೋಗುವುದಕ್ಕೆ ಆಗುವುದಿಲ್ಲ. ಈ ರೀತಿ ಇರುತ್ತದೆ. ದಯಮಾಡಿ ನೀವು ಬಹುಶಃ ನಮ್ಮ ಮೈಸೂರಿನ ಶಾಸಕರು ಹೇಳಿದ ಹಾಗೆ ಇಮ ಬಡವರಿಗೆ, ಮಧ್ಯಮ ವರ್ಗದವರಿಗೆ ಎನ್ನುವುದಕ್ಕಿಂತ ಹೆಚ್ಚಾಗಿ ಬಹುಶಃ ಹೇಳುತ್ತೇನೆ, ನಾವು ಶೇ 50 ಎಂದು ಕೊಟ್ಟು ಮತ್ತು ವಾಣಿಜ್ಯಕ್ಕೆ ಶೇ. 25 ಎಂದು ಕೊಡುವುದು ಒಂದು ಸೆಟ್ ಬ್ಯಾಕ್ ಏರಿಯಾಗಳದ್ದನ್ನು ಎಂದು ಹೇಳಿ ಅದನ್ನು ಸಕ್ರಮಗೊಳಿಸುವುದಕ್ಕೆ ಹೋಗತಕ್ಕಂಥದ್ದು ಅಪಾಯಕಾರಿ. ಆದಕಾರಣ ಈ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. Right to air right to light and right to live ಮತ್ತು ನಗರಗಳು ಇವೊತ್ತು ಸುಭದ್ರವಾಗಿ, ಸುರಕ್ಷಿತವಾಗಿ livable cityಗಳಾಗಬೇಕೇ ಹೊರತು human bombs ಆಗುವುದಕ್ಕೆ ಅವಕಾಶ ಮಾಡಿಕೊಡಬಾರದು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಈ ಬಿಲ್ ಬಗ್ಗೆ ನಗರ ಶಾಸಕರು ಹಾಗೂ ಇನ್ನಿತರ ಶಾಸಕರುಗಳೂ ಕೂಡ ಮಾತನಾಡಬಯಸುವುದರಿಂದ ಇದನ್ನು ಮುಂದೂಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಆಚಾರ್ಯರೆ, ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ. ನಾಲ್ಕು ಸೆಂಟೆನ್ಸ್ ನಲ್ಲಿ ಮುಗಿಸುತ್ತೇನೆ. ಇಲ್ಲ ತಾವು ಕನ್ ಫ್ಯೂಸ್ ಆಗಿದ್ದೀರಿ ಅಥವಾ deliberately ನಮ್ಮನ್ನು ಕನ್‌ಫ್ಯೂಸ್ ಮಾಡುವುದಕ್ಕೆ ಟ್ರೈ ಮಾಡುತ್ತಿದ್ದೀರಿ. Either of the two things should be right. ಒಂದು ವಿಚಾರ, residential purposesಗೆ, middle class and below middle class peopleಗೆ ಅನ್ವಯವಾಗುವ ರೀತಿಯಲ್ಲಿ ತಂದಿದ್ದರೆ, ಇದನ್ನು ನಾನು ಹೃದಯಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಏನೋ 30x40, 40x60 ಅಳತೆಯ ನಿವೇಶನದಲ್ಲಿ ಮನೆ ಕಟ್ಟುವುದಕ್ಕೆ ಹೋಗುವಾಗ ಏನೋ ಒಂದು ಕಾರೋಗೀರೋ ನಿಲ್ಲಿಸಿಕೊಳ್ಳುವುದಕ್ಕೆ, ವರಾಂಡಾನೋ ಗಿರಾಂಡಾನೋ ಅಥವಾ ವಾಸ್ತುಗೀಸ್ತು ಭಯ ಬಿದ್ದು ಮೆಟ್ಟಿಲು ಹಾಕುವುದಕ್ಕೆ ಈ ತರಹದ್ದನ್ನು ಮಾಡಿರುತ್ತಾರೆ. That can always be understood. permissible deviation from the law ಇಷ್ಟು ಎಂದೆ

ಹೇಳಿ ಲಾನಲ್ಲೇ ಪ್ರಾವಿಜನ್ ಕೊಟ್ಟಿದ್ದಾರೆ. ಅವನಿಗೆ ಕಾಂಪೌಂಡ್ ಮಾಡಿ ಹಾಲಿ ಶಾಸನ ಏನಿದೆ, ಟೌನ್ ಪ್ಲಾನಿಂಗ್ ಆ್ಯಕ್ಟ್ ಏನಿದೆ ಅದರ ಪ್ರಕಾರ ಒಂದು ವೇಳೆ ಡಿವಿಯೇಷನ್ ಆಗಿದ್ದರೆ ಎಷ್ಟು ಪರ್ಸೆಂಟ್ ಅಲೋ ಮಾಡಬಹುದು ಎನ್ನುವುದು ಶಾಸನದಲ್ಲಿ ಇದೆ. ಈಗ ನೀವು 50 ಪರ್ಸೆಂಟ್‌ವರೆಗೂ ಹೋಗುವುದಾ ಅಥವಾ 30 ಪರ್ಸೆಂಟವರೆಗೂ ಹೋಗುವುದಾ ಎಂದು ತೀರ್ಮಾನ ಮಾಡುತ್ತೀರಿ. ನಿಮ್ಮ ಪ್ರಕಾರ ಇದು ಒನ್ ಟೈಂ. ನೀವು ಹೋದ ನಂತರ ಇನ್ನೊಂದು ಐದತ್ತು ವರ್ಷಕ್ಕೆ ಇನ್ನೊಬ್ಬರು ಬಂದರೆ ಅವರು ಮಾಡಬಾರದು ಎಂದು ನಿರ್ಬಂಧ ಹೇರುವುದಕ್ಕೆ ನಿಮಗೇನಾದರೂ ಅವಕಾಶ ಇದೆಯಾ? ಅವರು ಒನ್ ಟೈಂ ಎಂದು ಅವರು ಮಾಡುತ್ತಾರೆ. ಹತ್ತತ್ತು ವರ್ಷಕ್ಕೆ ಒಂದು ಸಲ ಹೀಗೆ ಮಾಡುತ್ತಾ ಹೋದರೆ ಆಗ ಟೌನ್ ಪ್ಲಾನಿಂಗ್ ಆ್ಯಕ್ಟ್ ಏಕೆ ಇರಬೇಕು? ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಸಬ್ ಕಮಿಟಿಯಲ್ಲಿ ಆದ ರಿಸಲ್ಟ್ ಕೃಷ್ಣರವರ ಸರ್ಕಾರದ ತೀರ್ಮಾನ ಇವೆಲ್ಲಾ ನಿಮಗೆ ಪ್ರಿಸಿಡೆಂಟ್ ಆಗಿದೆ. ಅದೇ ನೀವು ಮಾಡಿದಂತಹ ಕೆಲಸ ಮುಂದೆ ಹತ್ತು ವರ್ಷಕ್ಕೆ ಬರುವವರಿಗೆ ಪ್ರಿಸಿಡೆಂಟ್ ಆಗಿ, ಅವರು ಅಂದು ಇನ್ನೊಂದು ಸ್ವಲ್ಪ ಜಾಸ್ತಿ ಮಾಡಿಸೋಣವೆಂದು 60 ಪರ್ಸೆಂಟ್‌ಗೆ ಏರಿಸಿದರೆ ಆಗ ಈ ಕಾನೂನು ಏಕೆ ಇರಬೇಕು ಹೇಳಿ? It is as good as infructuous ಅಲ್ವಾ ಇರಲೇಬೇಕಾಗಿಲ್ಲ. ಅಸ್ತಿತ್ವದಲ್ಲಿ ಆ ಶಾಸನ ಇರಬೇಕಾಗಿಲ್ಲ. ಮತ್ತು ಕಮರ್ಷಿಯಲ್, ಇಲ್ಲಿ ಒಂದು ಅರ್ಥ ಮಾಡಿಕೊಳ್ಳಿ ಯಾರು ನಮ್ಮ ರಾಜ್ಯದವರು, ನಮ್ಮ ಮಧ್ಯದಲ್ಲಿ ಇರತಕ್ಕಂಥವರು ಸಾಮಾನ್ಯ ಜನ ನಿಮಗೆ ನಮಗೆ ಪ್ರಯೋಜನಕ್ಕೆ ಬರತಕ್ಕಂಥವರು, ಈ ಮಣ್ಣಿನ ವಾಸನೆಯನ್ನು ನೋಡಿದವರು, ಈ ಮಣ್ಣಿನ ಋಣ ತೀರಿಸಬೇಕೆಂದು ಇರುವವರು, ಅವರು ಪಾಪ ಈ ಸಾಹಸ ಮಾಡುವುದಕ್ಕೆ ಹೋಗಿಲ್ಲ. ಇವರೆಲ್ಲಾ, ರಹೇಜಾ, ಪಾಕೀಜಾ, ತುಮೀಜಾ ಎಲ್ಲಾ ಅಲ್‌ಬರ್ಟ್‌ಗಳು ಪ್ರೆಸಿಡೆನ್ಸಿಗಳು, Embassy Prestige ಇವರುಗಳು ಬಂದಿರುವವರು. ಅವರು ಬಂದ ತಕ್ಷಣ ನಿಮ್ಮ ಸುತ್ತ ಸುಳಿದಾಡಿದರು ಎಂದರೆ ಕೆಟ್ಟ ಹೆಸರು ಬರುತ್ತದೆ. ಈಗ ಅವರೇನೋ ಮಾಡಿರುತ್ತಾರೆ ಎಂದುಕೊಳ್ಳೋಣ, ಅವರು ಮಾಡಿದ್ದು ತಪ್ಪೇ; ಅವರು ತಪ್ಪು ಮಾಡಿದರು ಎಂದು ಇಂಥಾದ್ದರಲ್ಲಿ ರೋಲ್ ಮಾಡಲ್ಸ್ ನಲ್ಲಿ ಚೂಸ್ ಮಾಡಿಕೊಳ್ಳುತ್ತೀರಾ ನೀವು? You want to choose them as role models in matters like this? ಕಮರ್ಷಿಯಲ್ ಬಿಲ್ಡಿಂಗ್ಸ್ ನಲ್ಲಿ ಅಪಾರ್ಟ್‌ಮೆಂಟ್ಸ್ ಕಟ್ಟುವಾಗ ಕಟ್ಟುವಾಗ 40 ರಿಂದ 50 ಪರ್ಸೆಂಟ್ ಪ್ಲಾನ್ ಇಲ್ಲದೆ ಡಿವಿಯೇಷನ್ ಯಾರಾದರೂ ಮಾಡಿದರೆ, ಅವನಿಗೆ ಧೈರ್ಯ ಎಷ್ಟು ? ಏನು ಅವನ

ಧೈರ್ಯ? At what cost? Have you realised? ಸನ್ಮಾನ್ಯ ಮುಖ್ಯಮಂತ್ರಿಗಳೇ ಅವನ ಸೊಕ್ಕೇನು ಗೊತ್ತಾ : ತಮ್ಮನ್ನು ನಮ್ಮನ್ನು ಕೊಂಡು ಕೊಳ್ಳಬಹುದು ಎನ್ನುವ ಸೊಕ್ಕು ಅವನಿಗೆ. It is an insuit to this Legislature. ಸಾರ್ವಜನಿಕ ಜೀವನದಲ್ಲಿರುವವರನ್ನು ಹಣ ಬಿಸಾಕಿದರೆ ನಾಟ್ಯ ಮಾಡಿಸಬಹುದು ಎನ್ನುವ ಅಹಂಕಾರ ಇದೆ ಅವರಿಗೆ. ಇದು ನಮ್ಮಂತಹ ಸ್ವಾಭಿಮಾನಿಗಳಿಗೆ ಆಗತಕ್ಕಂಥ ಅಪಮಾನ Please understand. ಬಡವನಿಗೆ ಸೆಲ್ಯೂಟ್ ಹೊಡೆದು ಅವನ ಕೆಲಸವನ್ನು ಮಾಡಿಕೋಡೋಣ. I don't say But, before a rich man, let not this Legislature bow down its head. Let us not, those who are in public life, bend down our heads. What if, he is not going to help us? ನಾವೇನು ಅವನು ಇರುತ್ತಾನೆ, ಘಂಡೆ ಕೊಡುತ್ತಾನೆಂದು ರಾಜಕಾರಣಕ್ಕೆ ಬಂದವಾ? ಪಾರ್ಟಿಗಳನ್ನು ಕಟ್ಟಿದೆವಾ? Let us chase them out. Let us punish them. Let us act revengefully towards them. ನಿಮ್ಮ ಪ್ರೆಸ್ಟೀಜ್ ಆಗ ಹೆಚ್ಚಾಗುತ್ತದೆ. Don't try to quote these people as precedents and try to proceed.ಇಷ್ಟು ಹೇಳಿದ ಮೇಲೂ ಕೂಡ ಇಲ್ಲ, ಇಲ್ಲ ನಾವು ಮಾಡೇ ಮಾಡುತ್ತೇವೆಂದರೆ, ಈ ಸನ್ನಿವೇಶ ನೋಡಿಕೊಂಡು, ಕೊನೇ ದಿವಸ ಎಲ್ಲರೂ ಊರಿಗೆ ಹೊರಟು ಹೋಗಿರುವಾಗ ಯಾರೂ ಇಲ್ಲದೆ ಇದ್ದಾಗ bare minimum quorum ಇದ್ದಾಗ ಮಾಡಿಕೊಳ್ಳುತ್ತೇವೆ ಎಂದರೆ ಹಡ್ರೆಂಡ್ ಪರ್ಸೆಂಟ್ ಶಾಶ್ವತವಾಗಿ ನೀವು ದುರುದ್ದೇಶದಿಂದಲೇ ಅಂತಹವರ ಜೊತೆಗೆ ಶಾಮೀಲಾಗಿ ಮಾಡಿದ್ದೀರಿ, ಎಂದು ಅನಿವಾರ್ಯವಾಗಿ ನಿಮ್ಮ ಮೇಲೆ ನಾನು ಆಪಾದನೆಯನ್ನು ಮಾಡಬೇಕಾಗುತ್ತದೆ.

ಶ್ರೀ ಎ. ತನ್ವೀರ್ ಸೇಠ್ : ಮಾನ್ಯ ಅಧಕ್ಷರೆ, ಮಾನ್ಯ ಸಚಿವರ ಗಮನಕ್ಕೆ ಒಂದು ತರುವುದೇನೆಂದರೆ, Town and Country Planning Act is one ಆದರೆ ಆ ಸ್ಥಳೀಯ ಸಂಸ್ಥೆಗಳು ರೂಪಿಸಿಕೊಂಡಿರುವಂತಹ ಬೈಲಾಗಳು ನಾನಾ ರೀತಿಯಲ್ಲಿ ಬೇರೆ ಬೇರೆ ರೀತಿ ಇರುತ್ತವೆ. ಇವತ್ತು ಸರ್ಕಾರ ಮಾಡಬೇಕಾಗಿರುವಂತದ್ದು ರಾಜ್ಯದಲ್ಲಿ ಇರುವಂತಹ ವಿವಿಧ ಸ್ಥಳೀಯ ಸಂಸ್ಥೆಗಳೇನಿವೆ ಅದರಲ್ಲಿ ಅವರು ರಚಿಸಿಕೊಂಡಿರುವಂತಹ ಬೈಲಾಸ್ ಏನಿದೆ, ಅದನ್ನು ಫಸ್ಟ್ ನೀವು ನೋಡಿದ ಮೇಲೆ, ಮತ್ತೆ ನಿಮ್ಮ ಟೌನ್ ಅಂಡ್ ಕಂಟ್ರಿ ಪ್ಲಾನ್ ಆ್ಯಕ್ಟ್‌ಗೆ ನೀವು ತರುವಂತಹ ತಿದ್ದುಪಡಿ, ಎರಡನ್ನೂ ಕೂಡ ಕ್ರೋಡೀಕರಿಸಿ ನೀವು ಕೆಲಸ ಮಾಡಿಸಹುದು. ಇವತ್ತು ಏನಾಗುತ್ತದೆ ಅಂದರೆ ಬೆಂಗಳೂರು ನಗರಕ್ಕೆ ಮತ್ತು ಮೈಸೂರು ನಗರಕ್ಕೆ ಹೋಲಿಸಿಕೊಂಡಾಗ ಬೆಂಗಳೂರಿನಲ್ಲಿ high rise building ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಅದೇ ಮೈಸೂರಿಗೆ ಬಂದಾಗ ಫ್ಲೋರ್ ಏರಿಯಾ

ಯುಟಲೈಸೇಷನ್ ಏನಿದೆ, ಅದು ಅತೀ ಕಡಿಮೆ ಇದೆ. ಈ ಎಲ್ಲಾ ನ್ಯೂನತೆಗಳು ಇರಬೇಕಾದರೆ, ನೀವು ಇದನ್ನು ತೆಗೆದುಕೊಂಡು ಬಂದರೆ ಯಾವ ಕಾಣದೆ ಇರುವಂತಹ ಕೈಗಳಿವೆ, ಅದರಿಂದ ಅವರಿಗೆ ಅನುಕೂಲವಾಗುತ್ತದೆ. ನಾವು ಬಡವರಿಗೆ ಏನಾದರೂ ಅನುಕೂಲ ಮಾಡಬೇಕಾದರೆ ಬರಿ ರೆಗ್ಯೂಲರೈಸೇಷನ್ ಆಫ್ ಅನ್ ಅಥಾರೈಸ್ಡೆ ಕನ್‌ಸ್ಟ್ರಕ್ಷನ್ ಅದರಲ್ಲೂ ಒಂದು ಸೈಜ್ ಹಾಕಿ ನೀವು ಮಾಡಿದರೆ ಬಹುಶಃ ಅದರಿಂದ ಅನುಕೂಲ ವಾಗುತ್ತದೆಂದು ನನ್ನ ಭಾವನೆ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಯಾವುದೇ ನಗರಾಡಳಿತಕ್ಕೆ ಸಂಬಂಧಪಟ್ಟಂತಹ ಕಾನೂನು ಅದರಲ್ಲೂ ಬಿಲ್ಡಿಂಗ್ ಬೈಲಾ ಮತ್ತು ನಮಗೆ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆ್ಯಕ್ಟ್‌ನಲ್ಲಿ ಯಾವುದೇ ಡೈಲ್ಯೂಷನ್ ಮಾಡುವಂತಹ ವಿಚಾರಕ್ಕೆ ವೈಯಕ್ತಿಕವಾಗಿ ನನಗೆ ಒಪ್ಪಿಗೆ ಇಲ್ಲ ನಾನು ಎಂಟು ವರ್ಷಗಳ ಕಾಲ ನಗರಸಭೆ ಅಧ್ಯಕ್ಷನಾಗಿದ್ದೆ. ಆ ಕಾಲದಲ್ಲಿ ನನಗೆ ಅನುಭವಕ್ಕೆ ಬಂದಿತ್ತು. ಎಷ್ಟೋ ಜನ ಅವರಿಗೆ ಗೊತ್ತಿಲ್ಲದೆಯೋ ತಾವು ಹೇಳಿದಂತೆ ಬಡಜನರು ಅಥವಾ ಯಾರೋ ಒನ್ ಟೈಂ ಅಸಿಸ್ಟೆನ್ಸ್ ಅವರು ಸಮಬಂಧಿಕರು ದುಡ್ಡು ಕೊಟ್ಟರು ಎಂದು ಮನೆ ಕಟ್ಟಿ. ಈ ರಿತಿ ಆದಂತಹ ಪ್ರಕರಣಗಳು ಇವೆ. ಆದುದರಿಂದ ನಾನು ಯಾವುದೇ ಮಾಹಿತಿಯನ್ನು ಮುಚ್ಚಿಡುವಂತಾದ್ದು ಅಥವಾ ತಮ್ಮನ್ನು ಕನ್‌ಫ್ಯೂಸ್ ಮಾಡುವಂತಹ ಕೆಲಸಕ್ಕೆ ಇಲ್ಲಿ ನಿಂತಿಲ್ಲ. ವಿಷಯ ಏನೆಂದರೆ ನನ್ನ ಗಮನಕ್ಕೆ ನನ್ನ ಊರಿನಲ್ಲಿ ಮತ್ತು ಆ ಜಿಲ್ಲೆಗಳಲ್ಲಿ ಬಂದಿರುವಥಾಂದ್ದು, ಅವರ ಜೀವಿತ ಕಾಲದಲ್ಲಿ ಅವರು ಕಷ್ಟಪಟ್ಟು ಕಟ್ಟಿದಂತಹ ಮನೆಗೆ ಒಂದು ಸಣ್ಣ ವಯಲೇಷನ್ ಆಯಿತು ಎಂದು ಅವರಿಗೆ ಆಗದಿದ್ದವರು ಬೇರೆ ಬೇರೆ ಕಾರಣದಿಂದ ಕೋರ್ಟ್‌ನಿಂದ ಡೆಮಾಲೆಷನ್‌ಗೆ ಬಂದಾಗ ಅಂತಾದ್ದು, ಮತ್ತು ರಾಜ್ಯ ಹೈಕೋರ್ಟ್‌ನಿಂದ...

ಶ್ರೀ ಎ. ಕೃಷ್ಣಪ್ಪ : ಡಾಕ್ಟರ್ ರವರೇ ಬೇಜಾರು ಮಾಡಿಕೊಳ್ಳಬೇಡಿ. ನಿಮಗೆ ಒಂದು ಸಲಹೆ ಕೊಡುತ್ತೇನೆ. Only to assist you ಅಂಥದ್ದು ತೆಗೆದುಕೊಂಡು ಬನ್ನಿ, ನಾವು ಒಂದು ಕ್ಷಣದಲ್ಲಿ ಮಾಡಿಕೊಟ್ಟು ಬಿಡುತ್ತೇವೆ. ನೀವು ಕಮರ್ಷಿಯಲ್ ಎಲ್ಲಾ ಸೇರಿ ತೆಗೆದುಕೊಂಡು ಬಂದರೆ, ಯಾರು ಮಾಡುತ್ತಾರೆ ಅಂತಹವರಿಗೆ ತೆಗೆದುಕೊಂಡು ಬಂದರೆ ಸ್ವಾಗತ.

ಡಾ : ವಿ.ಎಸ್. ಆಚಾರ್ಯ : ಇವತ್ತು ಮಾನ್ಯ ತನ್ವೀರ್‌ಸೇಠ್ ಅವರು ಹೇಳಿದಂತೆ ಟೌನ್ ಅಂಟ್ ಕಂಟ್ರಿ ಪ್ಲಾನಿಂಗ್ ಆ್ಯಕ್ಟ್‌ನ ಎಲ್ಲಾ ಪ್ರದೇಶಗಳಿಗೆ ಮತ್ತು ಎಲ್ಲಾ ಕಾರ್ಪೊರೇಷನ್ ಗಳಿಗೆ ಸಂಬಂಧಪಟ್ಟ ಹಾಗೆ ಮತ್ತು ನಗರ ಸಭಾ 187 (ಎ) ಕಲಂನ ಪ್ರಕಾರ ಇದರ ಲಾಭ ಬರೀ ಬೆಂಗಳೂರಿಗೆ ಎಂದಲ್ಲ,

ಬೆಂಗಳೂರಿಗಿಂತ ಹೆಚ್ಚು ಇಡೀ ರಾಜ್ಯದ ಎಲ್ಲಾ ಕಡೆ this is going to be effected one time ಇದನ್ನು ಮುಂದೆ ಏನೂ ಮಾಡುವುದಿಲ್ಲ.

SRI K.R. RAMESH KUMAR : You have to prevent the man coming next, not to take resort to civil action. ನಮಗೆ ಅರ್ಥವೇ ಆಗುವುದಿಲ್ಲ ಡಾಕ್ಟರ್ ತಾವು ಹೀಗೆ ಹೇಳುತ್ತೀರಿ ಎಂದರೆ. ಬೇರೆ ಯಾರಾದರು ಹೇಳಿದ್ದರೆ I can understand ಒನ್‌ಟೈಂ ಎಂದರೆ ನಿಮ್ಮ ಹತ್ತಿರ ಯಾವ ಅಧಿಕಾರ ಇದೆ. ಹೇಳಿ. ಮುಂದೆ ಒಂದು ದಿವಸ ಮತ್ತೊಬ್ಬರು ಇಂಥಾದ್ದೇ ಒಂದು ಶಾಸನವನ್ನು ತರಲಿಕ್ಕೆ ಇದಕ್ಕೆ ತಿದ್ದುಪಡಿಯನ್ನು ತಂದರೆ ಅದನ್ನು ತಡೆಯುವುದಕ್ಕೆ ನಿಮ್ಮ ಹತ್ತಿರ ಏನು ಅಧಿಕಾರ ಇದೆ ಹೇಳಿ?

ಡಾ ; ವಿ.ಎಸ್. ಆಚಾರ್ಯ : ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಎರಡೂ ಸದನಗಳು ಒಪ್ಪಿಗೆ ಕೊಟ್ಟಂತಹ ತಿದ್ದುಪಡಿ ಇದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅಂದು ಅವತ್ತಿನ ಸದನಗಳು ಅವರ ವಿವೇಚನೆಯಿಂದ ಅವರಿಗೆ ತೋಚಿದಂತಹ ಒಂದು ದೃಷ್ಟಿಯಿಂದ ಒಪ್ಪಿರಬಹುದು. That is not binding on us. As vigilant members of this august house, being representatives of this House, we exercise our right with absolute discretion, and it says no to this.

Dr: V.S. ACHAR : Sir, Please permit me to submit few things ಗೌರವಾನ್ವಿತ ರಾಜ್ಯಪಾಲರು ಮಾಡಿದ ಆಕ್ಷೇಪಣೆಗಳನ್ನು ಸರಿಪಡಿಸುವ ಕುರಿತು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಯಿತು. ಸಚಿವ ಸಂಪುಟದ ಸಲಹೆ ಮೇರೆಗೆ ಪುನಃ ಕೆಲವು ತಿದ್ದುಪಡಿಗಳನ್ನು ತರಲು ಈಗ ಉದ್ದೇಶಿಸಿದೆ. ಅವುಗಳಲ್ಲಿ. ಪ್ರಮುಖವಾದವುಗಳೆಂದರೆ ಈ ಕಾಯಿದೆ ಅನುಷ್ಠಾನಕ್ಕೆ ಬರುವುದಕ್ಕಿಂತ ಮುಂಚಿತವಾಗಿ ಕಟ್ಟಲ್ಪಟ್ಟ ಕಟ್ಟಡ ಮತ್ತು ಬೆಳವಣಿಗೆಗಳನ್ನುಅಗತ್ಯ ನಿಯಮಗಳನ್ನು ರಚಿಸಿ ಬೇರೆ ಬೇರೆ ಉದ್ದೇಶಗಳಿಗೆ ಬೇರೆ ಬೇರೆ ದಂಡಗಳನ್ನು ವಿಧಿಸಲು ಅವಕಾಶಗಳನ್ನು ಕಲ್ಪಿಸಿರುವುದು. ಅಗತ್ಯ ನಡು ಜಾಗಗಳನ್ನು, ಸೆಟ್ ಬ್ಯಾಕ್‌ಗಳನ್ನು ಮತ್ತು ಎಫ್‌ಆರ್‌ಗಳ ವ್ಯತಿರಿಕ್ತತೆಗಳನ್ನು ವಸತಿ ಕಟ್ಟಡಗಳಿಗೆ ಶೇಕಡ 50 ರವರೆಗೆ ಮತ್ತು ವಸತಿಯೇತರ ಕಟ್ಟಡಗಳಿಗೆ ಶೇಕಡ 25 ರವರೆಗೆ ಮಾತ್ರ ವಿಧಿಬದ್ಧಗೊಳಿಸಲು ಅವಕಾಶ ಕಲ್ಪಸಿರುವುದ. ವ್ಯತಿರಿಕ್ತವಾಗಿ ಕಟ್ಟಲ್ಪಟ್ಟ ಕಟ್ಟಡಗಳನ್ನು ಮತ್ತು ಅಭಿವೃದ್ಧಿಗಳನ್ನು ವಿಧಿಬದ್ಧಗೊಳಿಸಲು ಅರ್ಜಿಗೊಳಿಸದೆ ಇದ್ದಲ್ಲಿ, ಅಂತಹ ಕಟ್ಟಡಗಳಿಗೆ ನೀರು ಮತ್ತು ವಿದ್ಯುತ್ ಸಂಪರ್ಕಗಳನ್ನು ಮುಂಚಿತವಾಗಿ ತಿಳುವಳಿಕೆ ನೀಡಿ ಕಡಿತಗೊಳಿಸುವುದು. ಹಸಿರು ಪಟ್ಟಿಯಲ್ಲಿ

ಅನಧಿಕೃತವಾಗಿ ಅಭಿವೃದ್ಧಿಪಡಿಸಿರುವುದನ್ನು ವಿಧಿಬದ್ಧಗೊಳಿಸದೆ ಇರುವುದು, ವಿಧಿಬದ್ಧಗೊಳಿಸುವಾಗ ಯೋಜನಾ ಪ್ರಾಧಿಕಾರಿಗಳು ಸಂಗ್ರಹಿಸಲ್ಪಟ್ಟ ಶುಲ್ಕಗಳನ್ನು ಡೆವಲಪ್‌ಮೆಂಟ್ ಫಂಡ್ ಎಂದು ಸಂಗ್ರಹಿಸಿ ಈ ಮೊತ್ತವನ್ನು ಆಯಾ ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿಪಡಿಸಲು ಎಂದರೆ ಕುಡಿಯುವ ನೀರು ಸರಬರಾಜು ಉದ್ಯಾನವನ ಯೋಜನೆಗಳಿಗೆ ಉಪಯೋಗಿಸಲು ಅವಕಾಶ ಕಲ್ಪಿಸುವುದು ಮತ್ತು ಅನಧಿಕೃತ ಬೆಳವಣಿಗೆಗಳನ್ನು ತಡೆಗಟ್ಟಲು ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲು ಅವಕಾಶ ಕಲ್ಪಿಸಿರುವುದು ಪ್ರಮುಖವಾದವುಗಳಾಗಿವೆ. ಈಗ ತಾವು ಕೆಲವುಪ್ರಮುಖ ವಿಷಯಗಳನ್ನು ಕೇಳಿದಿರಿ. ಎಷ್ಟು ದಂಡಗಳು ಎಂದು ಕೇಳಿದಿರಿ. ಈಗ ಸೆಟ್‌ಬ್ಯಾಕ್‌ನಲ್ಲಿ ರೆಸಿಡೆನ್ಷಿಯಲ್ ಎಂದಾದರೆ '0' ಯಿಂದ 25 ಪರ್ಸೆಂಟ್ ವಯಲೇಷನ್ ಇದ್ದಲ್ಲಿ up to25 only. Then it stops, ಗೊತ್ತಾಯಿತಲ್ಲಾ. Violation up to 25 only. Suppose, say, it is 10 % ಆಗ 0 ಯಿಂದ 25 ರೇಂಜ್ ನಲ್ಲಿ ಇರುವಂಥಾದ್ದಕ್ಕೆ ಗೈಡೆನ್ಸ್ ವ್ಯಾಲ್ಯೂ ಮತ್ತು ಮಾರ್ಕೆಟ್ ವಾಲ್ಯೂ ಅದನ್ನು ಇಂಟಿಗ್ರೇಟ್ ಮಾಡಿ, ಮೊದಲು ಅದು ಗೈಡೆನ್ಸ್ ವ್ಯಾಲ್ಯೂ ಎಂದು ಮಾತ್ರ ಇತ್ತು, ಅದರ ಜೊತೆಗೆ ಮಾರ್ಕೆಟ್ ವ್ಯಾಲ್ಯೂ ಇಂಟಿಗ್ರೇಟ್ ಮಾಡಿ ಮತ್ತು ಅದರಲ್ಲಿ ಇರುವಂತಹ ಸೂಪರ್ ಸ್ಟ್ರಕ್ಚರ್ ಏನಾದರು ಇದ್ದರೆ ನಾವು ತೆಗೆಯಬೇಕಾದಂತಹ ಜಾಗದಲ್ಲಿ, ಅದಕ್ಕೆ ಪಿಡಬ್ಲ್ಯೂಡಿನ ರೆಫರೆನ್ಸ್ ವ್ಯಾಲ್ಯೂ ತೆಗೆದುಕೊಂಡು ಒಟ್ಟು ನಾವು ಸಾಮಾನ್ಯ ಜನರು ಬಡವರೇ ಇದ್ದಂತಹವರಿಗೆ ಹತ್ತು ಪರ್ಸೆಂಟ್ ಮಾರ್ಕೆಟ್ ವ್ಯಾಲ್ಯೂ ಅಷ್ಟು residenceಗೆ ಮಾಡುವುದು. ಇನ್ನು ರೆಸಿಡೆನ್ಸ್ ನವರಿಗೆ 25 ರಿಂದ 50 ಪರ್ಸೆಂಟ್ ಇದೆ 25 of the Market value and guidnce value ಇನ್ನು ನಾನ್ ರೆಸಿಡೆನ್ಷಿಯಲ್‌ನವರಿಗೆ '0' ಯಿಂದ 12.50 ಪರ್ಸೆಂಟ್ 25 ಪರ್ಸೆಂಟಿದೆ. ನೋಡಿ ಅಲ್ಲಿ ಹೆಚ್ಚಿಗೆಯಾಗಿದೆ. 12.50% ನಿಂದ 25% ವರೆಗೆ ಅವರಿಗೆFloor area ration ಕ್ಕೂ 25% violationಗೆ ಮತ್ತು floor area rationನಲ್ಲಿ violation ಆದರೂ residentialಗೆ 50% ನವರೆಗೆ ಮತ್ತು floor area ratio non-residential 25% ನವರೆಗೆ ಈ ಎರಡಕ್ಕೂ ಪ್ರತ್ಯೇಕ fees ಇದೆ. ಮತ್ತು ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ನಿರ್ಣಾಯಕವಾಗಿ ಗೊತ್ತಾದರೆ ಅವರಿಗೆ ಶಿಕ್ಷೆಗೆ ಸಹ ಮಾಡಿದ್ದೇವೆ. ಇವೆಲ್ಲವನ್ನೂ ಬರತಕ್ಕಂಥ ನೋಟಿಫಿಕೇಶನ್ ಮುಖಾಂತರ ಮಾಡುತ್ತೇವೆ. ನಾನು ತಮಗೆ ಒಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ಕೆ.ಆರ್. ರಮೇಶ್‌ಕುಮಾರ್ ರವರು ಹಾಗೂ ಮಾನ್ಯ ಎ. ಕೃಷ್ಣಪ್ಪನವರು ಸಾಕಷ್ಟು ಕಳಕಳಿಯನ್ನು ತೋರಿಸಿದ್ದಾರೆ.

ಇದು ಇಡೀ ರಾಜ್ಯದಲ್ಲಿ ಬಹುತೇಕ middle class and lower middle classನವರಿಗೆ ಇರತಕ್ಕಂಥ ಸಮಸ್ಯೆ. ಅಲ್ಲಿಯ ಅಧಿಕಾರಿಗಳು ಚಿತ್ರ ಹಿಂಸೆ ಮಾಡುತ್ತಿದ್ದಾರೆ. ನಿಮಗೆ ನೋಟಿಸ್ ಕೊಡುತ್ತೇವೆ, ನಿಮ್ಮ ಮನೆಯನ್ನು demolish ಮಾಡುತ್ತೇವೆಂದು ಈ ರೀತಿ ಮಾಡುತ್ತಿದ್ದಾರೆ. ಹಾಗಾಗಿ ಇದರ ಬಗ್ಗೆ Court is also aware of this (04) law.ಹಾಗಾಗಿ ಕೋರ್ಟ್‌ನಿಂದಲೂ ಕೂಡ......

ಶ್ರೀ ಎ. ತನ್ವೀರ್ ಸೇಠ್ : ಈಗ ತಾವು unauthorized constructions, ಬಡವರ ಬಗ್ಗೆ ತಾವು ಮಾತನಾಡಿದಿರಿ. Are you going to give them the title of the property?

Dr :V.S. ACHAR : No

ಶ್ರೀ ಎ. ತನ್ವೀರ್ ಸೇಠ್ : ಟೈಟಲ್ ಕೊಡುವುದಿಲ್ಲವೆಂದರೆ ಅವರು ಏಕೆ ತೆಗೆದು ಕೊಳ್ಳುತ್ತಾರೆ? ಇದರಲ್ಲಿ ಆಗುವುದಿಲ್ಲ ಸರ್.

ಡಾ : ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, At the end of the day of the also, for no reasons, you are getting confused.

ಶ್ರೀ ಎ. ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, Residential buildings ಗೆ 50% ಅ norms ಅನ್ನು ಸರಳ ಮಾಡಿಕೊಟ್ಟುಬಿಟ್ಟರೆ Where is the provision for light and air to come? ಇದರಿಂದ ಏನಾಗುತ್ತದೆ ಎಂಬುದು ನಿಮಗೆ ಇಂದು ಗೊತ್ತಾಗುವುದಿಲ್ಲ. We are creating yet another concrete jungle.ಈಗ ಬೆಂಗಳೂರು ಸಂಪೂರ್ಣವಾಗಿ ನಾಶವಾಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಈಗ ಕಟ್ಟಿರುವಂಥ building ಗಳನ್ನೆಲ್ಲಾ ಒಡೆದುಬಿಡೋಣವೇ? ಈಗ ಸರ್ಕಾರಕ್ಕೂ ಆದಾಯ ಇಲ್ಲ. ಈಗ ಎಲ್ಲರೂ enjoy ಮಾಡುತ್ತಿದ್ದಾರೆ. ಇಲ್ಲ ಆ buildingಗಳನ್ನೂ ನಾವು ಒಡೆಯಬೇಕು. ಇದು ಬೆಂಗಳೂರಿನಲ್ಲಿ 100ಕ್ಕೆ 80 ಭಾಗ violation ಆಗಿದೆ. 500% violation ಆಗಿರುವಂಥ ವರದಿಗಳೂ ಇವೆ. ಈಗ ನಾವು 50%ಗೆ ಏಕೆ limit ಮಾಡಿಕೊಳ್ಳಬೇಕು..

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸರ್, ನನ್ನ ಎಲ್ಲಾ ಪ್ರಯತ್ನಗಳೂ ನಿಮ್ಮನ್ನು ಎಬ್ಬಿಸಬೇಕು ಎಂದು ಇತ್ತು. ನೀವೀಗ ಎದ್ದಿರಿ. ನನಗೆ ಸಂತೋಷವಾಯಿತು. ಆ buildingಗಳನ್ನು ಒಡೆಯಬೇಕು ಸರ್ ನಾನು ಏಕೆ ಹೇಳುತ್ತೇನೆಂದರೆ, ನೀವು ಕಟ್ಟಡವನ್ನೆಲ್ಲಾ ಒಡೆಯುವುದು. ಸರ್ಕಾರವನ್ನು ಮೂರುಕಾಸು ಎಂದು ಲೆಕ್ಕಾ ಹಾಕುವವರು, ರಾಜಕಾರಣಿಗಳನ್ನು ಯಾವ ಮಹಾ ಎಂದು ಲೆಕ್ಕ ಹಾಕುವವರು ಹೈಕೋರ್ಟ್ ಅನ್ನು ನಾನು adjust

ಮಾಡಿಕೊಳ್ಳುತ್ತೇನೆ ಎಂದು ಲೆಕ್ಕ ಹಾಕುವ ಯಾರು ಈ ಸೊಕ್ಕಿನವರು ಇದ್ದಾರೆ, ಆ ಸೊಕ್ಕನ್ನು ನೀವು ಮುರಿಯಬೇಕು, ಆ buildingಗಳನ್ನು ಅಲ್ಲ ನೀವು ಬಡವರಿಗೆ ಕೊಟ್ಟರೆ ಏನೂ ತೊಂದರೆ ಇಲ್ಲ. ದಯಮಾಡಿ ಕೊಡಿ. ನಿಮ್ಮ ಹೆಸರಿನಲ್ಲಿ ಅವರೆಲ್ಲಾ ನೆಮ್ಮದಿಯಾಗಿರುತ್ತಾರೆ ಅವರು ನಿಮ್ಮ ಫೋಟೋವನ್ನು ಹಾಕಕೊಳ್ಳುತ್ತಾರೆ. ನಿಮಗೆ ಗೌರವ ಬರುತ್ತದೆ. ಬಡವರಿಗೆ ಮಾಡುವುದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ, ಡಾ: ಆಚಾರ್ಯ ರವರು ಭ್ರಮೆಯಲ್ಲಿದ್ದಾರೆ. ಅವರು ಅಧಿಕಾರಿಗಳಿಗೆ ಶಿಕ್ಷೆಯನ್ನು ಕೊಡುತ್ತಾರಂತೆ ಗಂಗಾರಾಮ್ ಬಿಲ್ಡಿಂಗ್ ಬಿದ್ದುಹೋಯಿತು. ಆಗ ಅಧಿಕಾರಿಗಳಿಗೆ ಶಿಕ್ಷೆ ಕೊಟ್ಟೆವಾ? ಅಲ್ಲಿ ಎಷ್ಟು ಜನ ಹೂತುಹೋದರು? building ಏಕೆ ಬಿತ್ತು? Plan sanction ಮಾಡಿದವರಿಗೆ ಏನಾದರೂ ಶಿಕ್ಷೆ ಆಯಿತೆ ? ಎಷ್ಟು ಜನಕ್ಕೆ ಶಿಕ್ಷೆಯಾಯಿತು? ಸತ್ತುಹೋದವರಿಗೆ ಶಿಕ್ಷೆಯಾಯಿತು. Indian Electricity Act ಪ್ರಕಾರ horizontal ಆಗಿ vertical ಆಗಿ, 18feet ಯಾವುದೇ temporary ಅಥವಾ permanent structures ಬರಬಾರದು Venus Circusಗೆ permission ಕೊಟ್ಟರು. ಅದು 12 ಅಡಿ ಇತ್ತು. 345 ಜನ ಮಕ್ಕಳು, ಹೆಂಗಸರು ಸತ್ತುಹೋದರು. ಯಾವ ಮಗು Einstein ಆಗುತ್ತಿತ್ತೋ? ಯಾವ ಮಗು ವಿಶ್ವೇಶ್ವರಯ್ಯ ಆಗುತ್ತಿತ್ತೋ? ಯಾವ ಮಗು ಈ ದೇಶದ ನಾಯಕ ಆಗುತ್ತಿತ್ತೋ ನಮಗೆ ಗೊತ್ತಿಲ್ಲ. ಆ ತಂದೆ ತಾಯಿಗಳ ಮಡಿಲು ಖಾಲಿಯಾಯಿತು. ಆ ಮಕ್ಕಳು ಸತ್ತು ಕರಕಲು ಆಗಿಹೋಗಿಬಿಟ್ಟರು. ಇಲ್ಲಿ ಯಾರಿಗೆ ಶಿಕ್ಷೆಯಾಯಿತು? ಈ ದೇಶದಲ್ಲಿ ಅಧಿಕಾರಿಗಳಿಗೆ ಶಿಕ್ಷೆ ಕೊಡುತ್ತೇವೆಯೇ? ಕೊಡುತ್ತೇವೆ. ಅದು ಯಾರಿಗೆ ಕೊಡುತ್ತೇವೆ ಎಂದರೆ ಯಾರಿಗೆ ಜಾತಿ ಬಲ ಇರುವುದಿಲ್ಲ, ಯಾರಿಗೆ ದುಡ್ಡಿನ ಬಲ ಇರುವುದಿಲ್ಲ ಅಂಥವರಿಗೆ ಶಿಕ್ಷೆ ಕೊಡುತ್ತೇವೆ. ನಾವು ಏಕೆ ಜಾತೆ system ಇಟ್ಟುಕೊಂಡಿರುವುದು? ಇವರನ್ನೆಲ್ಲಾ ರಕ್ಷಣೆ ಮಾಡುವುದಕ್ಕೆ History ಯಲ್ಲಿ ಯಾವ ಅಧಿಕಾರಿಗಳಿಗೆ ಶಿಕ್ಷೆಯಾಗಿದೆ ಎಂಬುದನ್ನು ಸ್ವಲ್ಪ ಹೇಳಿ. ಇಂಥ ಅಧಿಕಾರಿ ಇಂಥ ತಪ್ಪು ಮಾಡಿದ್ದ, ಇವನಿಗೆ ಶಿಕ್ಷೆ ಕೊಟ್ಟಿದ್ದೇವೆ, ಇವನು jail ಗೆ ಹೋಗಿದ್ದ ಎಂದು. ಪಾಪ ವಾಸುದೇವನ್‌ರವರು ಒಬ್ಬರು jail ಗೆ ಹೋಗಿ ಬಂದರು. ಯಾಕೆಂದರೆ ಅವರು ಜಾಸ್ತಿ ದೊಡ್ಡ ಅಪರಾಧ ಮಾಡಿದ್ದರು. ತಾವು ಒಬ್ಬರನ್ನು ತೋರಿಸಿ. ಒಬ್ಬ ಲುಚ್ಚಗೆ ಶಿಕ್ಷೆಯಾಗಿತ್ತು. ಒಬ್ಬ ಲಫಂಗನಿಗೆ ಆಗಿತ್ತು, ಇವರಲ್ಲಿ ಒಬ್ಬರ ಹೆಸರನ್ನು ದಯಮಾಡಿ ಹೇಳಿ ನಾನು ಕೇಳಿ ಆನಂದ ಪಡುತ್ತೇನೆ. ನಮ್ಮಲ್ಲಿ ಜಾತಿ ವ್ಯವಸ್ಥೆ ಇರುವವರೆಗೆ, ರಾಜಕಾರಣದಲ್ಲಿ ದುಡ್ಡಿನ ಪ್ರಭಾವ ಇರುವವರೆಗೆ ತಪ್ಪು ಮಾಡಿದ ಅಧಿಕಾರಿಗಳಿಗೆ ಶಿಕ್ಷೆ ಕೊಡುವ ಯೋಗ್ಯತೆ

ನಮಗೆ ಇದೆಯೇ? ಅಷ್ಟೊಂದು ನೈತಿಕತೆಯನ್ನು ನಾವು ಉಳಿಸಿಕೊಂಡಿದ್ದೆವೆಯೇ? Please tell me. We are all, Iam not trying to segreate you, politicians as a class, we haveforfeited our basic right to talk about it, Doctor. That is the way we have conducted ourselves.

ಶ್ರೀ ಎಂ. ತನ್ವೀರ್ ಸೇಠ್ : ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿರುವಂಥ ಅನಧಿಕೃತ ಕಟ್ಟಡಗಳನ್ನು ನೆಲಸಮ ಮಾಡಬೇಕೇ ಎಂಬ ಪ್ರಶ್ನೆಯನ್ನು ಏನು ಹಾಕಿದ್ದಾರೆ, ಇವತ್ತು ಯಾರ ವಿಚಾರವನ್ನು ನಾವು ಮಾತನಾಡುತ್ತಿದ್ದೇವೇ ಆ ಸ್ಥಳೀಯ ಸಂಸ್ಥೆಗಳು ನಕ್ಷೆಯನ್ನು ಮಂಜೂರು ಮಾಡಿದ ಮೇಲೆ ಆ ಅಧಿಕಾರಿಗಳ ಸಮಕ್ಷಮದಲ್ಲಿ ನಕ್ಷೆಯನ್ನು marking ಮಾಡಿ ಅವರು ಕಟ್ಟಡವನ್ನು ಶುರು ಮಾಡಬೇಕು. ಅಧಿಕಾರಿಗಳು ಮಾಡಿರುವಂಥ ಲೋಪದೋಷಗಳಿಂದ ಇಂತಹ ಅನಾಹುತ ಗಳನ್ನು ನಾವು ಮಾಡುವುದಕ್ಕೆ ತಯಾರಾಗಿಲ್ಲ. ನೀವು ಮಾಡಲೇಬೇಕು ಎಂದು ಹೇಳುವುದಾದರೆ ನಾನು ಇದರಲ್ಲಿ ಭಾಗಿಯಾಗಲು ಸಾಧ್ಯವಿಲ್ಲ. ನಾನು ಸಭೇಯನ್ನು ಬಿಟ್ಟು ಹೊರಗೆ ಹೋಗುತ್ತಿದ್ದೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಿ. ಸೋಮಣ್ಣ : ಡಾಕ್ಟರ್‌ರವರೇ, ಇದರಲ್ಲಿ parking ಮತ್ತು basement ಬಗ್ಗೆ ತಾವು ಏನು ಮಾಡಿದ್ದೀರಿ ಎಂಬುದನ್ನು ಹೇಳಲಿಲ್ಲ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, No, even for parking there is no concession.

ಶ್ರೀ ವಿ. ಸೋಮಣ್ಣ : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಾವು ಏಕೆ ನಿರ್ಧಾಕ್ಷಣ್ಯವಾಗಿ basement ಅನ್ನು car parkingಗಾಗಿ ಉಪಯೋಗ ಮಾಡಬೇಕೆಂದು ಮಾಡಬಾರದು? ಅದನ್ನು ಯಾವ ಕಾರಣಕ್ಕೂ ನಾವು unauthorised ಎಂದು consider ಮಾಡುವುದು ಬೇಡ.

ಡಾ : ವಿ.ಎಸ್. ಆಚಾರ್ಯ : ಕೆಲವು ತಪ್ಪು ಗ್ರಹಿಕೆಯಿಂದ ನಮ್ಮ ವಾದವನ್ನು ಮುಂದಿ ಡುತ್ತಿದ್ದೇವೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಸಚಿವರೇ, ಒಂದು clarification ಕೊಟ್ಟುಬಿಡಿ. ನಿಮ್ಮ ಬಿಲ್‌ಗೆ ಸಂಬಂಧಪಟ್ಟಹಾಗೆ ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ, ಈಗ 100flat ಗಳನ್ನು ಕಟ್ಟಿರುತ್ತಾರೆ, ಇದರ ಪ್ರಕಾರವಾಗಿ 50% ನೀವು rectify ಮಾಡುತ್ತೀರಿ. ನೀವು ಆ ರೀತಿ 50 flat extra

ಕಟ್ಟಿರುವುದನ್ನು ನೀವು rectify ಮಾಡಿಬಿಡುತ್ತೀರಾ? ಈ 50 flat ಗಳನ್ನು ಮಾರಾಟ ಮಾಡಿಬಿಡಬಹುದು, ಟೈಟಲ್ ಕೊಟ್ಟುಬಿಡಬಹುದು.

ಡಾ : ವಿ.ಎಸ್. ಆಚಾರ್ಯ: ಈ ರೀತಿ ಬರುವುದೇ ಇಲ್ಲ. This does not apply to that at all.

ಶ್ರೀ ನೆ.ಲ. ನರೇಂದ್ರ ಬಾಬು : ಫ್ಲಾಟ್ ಬರುವುದೇ ಇಲ್ಲವೇ?

Dr : V.S. ACHARYA : This applies to only some small concessions for set back irregularity and FAR violations. ನಾನು ಒಂದು ವಿಷಯವನ್ನು ಓದಿಬಿಡುತ್ತೇನೆ. ನಾನು ಒಂದು ತಪ್ಪು ಕೆಲಸವನ್ನು ಮಾಡಿದೆ ಎಂದು ಕಾಣುತ್ತದೆ. ನಾವು ಯಾವುದನ್ನು set right ಮಾಡುವುದಿಲ್ಲ, ಆಕ್ರಮ ಸಕ್ರಮ ಮಾಡುವುದಿಲ್ಲ ಎಂಬ ಬಗ್ಗೆ ಒಂದು ದೊಡ್ಡ list ಇದೆ. ಮೊದಲನೇಯದು ಈ Town and Country Planning Actನಲ್ಲಿ Land use, unless it goes to scrutiny of 14 ಬೇರೆ ಇಲ್ಲ. 14 ನಲ್ಲಿ ಏನು ಹೇಳುತ್ತಾರೆ, by due procedure of lawಎಂದು ಅದರ ಪ್ರಕಾರ ಮಾಡಬೇಕು.

"No such development or change in land use referred to in sub-section(1)...

(i) in the land affected by the alignments of any road or of proposed inner ring road, National High Ways, bypass road, outer ring road or mass rapid transit system....."

ತಾವು ಆ ಪ್ರಶ್ನೆಯನ್ನು ಕೇಳಿದಿರಿ. We are not going to give any concession there Because public interest is supreme.

"(ii) On the land belonging to the State Government or the Central Government..."

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, donot waste the time of this house ನಾನು ಯಾವುದನ್ನು pin point ಮಾಡಿದೆ ಎಂಬುದು ಮಾನ್ಯ ಸಭಾನಾಯಕರಿಗೆ ಅರ್ಥವಾಯಿತು. ಅವರು ಒಂದು ನಿಕಟವಾದಂಥ ಪ್ರಶ್ನೆಯನ್ನು ಕೇಳಿದರು. ಆ ಖಚಿತವಾದಂಥ ಪ್ರಶ್ನೆಗೆ ನನ್ನ ಅಭಿಪ್ರಾಯವನ್ನು ನಾನು ವ್ಯಕ್ತ ಪಡಿಸಿದ್ದೇನೆ. ನೀವು ಸರ್ಕಾರವಾಗಿ ಸಂಖ್ಯಾ ಬಲದ ದೃಷ್ಟಿಯಿಂದ ನೀವು ಇದನ್ನು ಡಾಸ್ ಮಾಡಿಕೊಂಡು ಹೋಗಲೇಬೇಕು ಎಂಬ ತೀರ್ಮಾನಕ್ಕೆ ತಾವು ಬಂದಿದ್ದರೆ, ನಮ್ಮ ಅಭಿಪ್ರಾಯವನ್ನು ನಾವು ಮಾನ್ಯ ಅಧ್ಯಕ್ಷರಿಗೆ ತಿಳಿಸಿ ಪ್ರಜಾಪ್ರಭುತ್ವದಲ್ಲಿ ನಮಗೆ ಏನು ಮಾರ್ಗವಿರುತ್ತದೆ ಅದನ್ನು ಅನುಸರಿಸಿಕೊಂಡು

ಹೋಗುತ್ತೇವೆ. ಏಕೆ ಸುಮ್ಮನೆ time waste ಮಾಡುವುದು? ನಮ್ಮ ಪಾಂಡಿತ್ಯ ಪ್ರದರ್ಶನಕ್ಕೆ ಇದು, ಇದು ಸಮಯವಲ್ಲ. ನಮ್ಮ ನಮ್ಮ ತಾತ್ವಿಕ ನಿಲುವನ್ನು ವ್ಯಕ್ತಪಡಿಸಬೇಕಾದಂಥ ನೈತಿಕ ಹೊಣೆಯನ್ನು ನಾವು ಹೊತ್ತಿದ್ದೇವೆ. ನಮ್ಮ ಅಭಿಪ್ರಾಯಗಳನ್ನು ತಮಗೆ ಹೇಳಿದ್ದೇವೆ. ನಾವು ಯಾವ ವಿಷಯದಲ್ಲಿ ಆಕ್ಷೇಪ ಎತ್ತಿದ್ದೇವೆ ಅದನ್ನು ಬಿಟ್ಟು ಉಳಿದಿದ್ದನ್ನೆಲ್ಲಾ ತಾವು ಹೇಳುತ್ತಿದ್ದೀರಿ. ನಿಮ್ಮ ಸಮಯ ಹಾಳು ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ನೀವು ನಾವು ತೀರ್ಮಾನ ಮಾಡಿಕೊಂಡೇ ಬಂದಿದ್ದೇವೆ, ಇಂಥ momentನಲ್ಲೇ ಇದು ಆಗಬೇಕು, ಇದನ್ನು ನಾವು ಪುನರ್ ವಿಮರ್ಶೆ ಮಾಡುವುದಕ್ಕೆ ನಾವು ತಯಾರಾಗಿಲ್ಲವೆಂದು ತಾವು ಹೇಳಿದರೆ ನಮ್ಮ ಪಾಡಿಗೆ ನಾವು ಹೋಗುತ್ತೇವೆ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೇ, ಸಧ್ಯದ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿರು ವಂಥ ವಾಸ್ತವಿಕ ಸ್ಥಿತಿಯನ್ನು ಮನಗಂಡು ನಾನು ತಮ್ಮ ಮುಖಾಂತರ ಸದನದ ಒಪ್ಪಿಗೆಯನ್ನು ಕೇಳುತ್ತಿದ್ದೇನೆ.

ಶ್ರೀ ನೆ.ಲ. ನರೇಂದ್ರ ಬಾಬು : ಈ ಅಧಿವೇಶನ ಸುಖಾಂತದಲ್ಲಿ ಮುಗಿದು, ಇಲ್ಲಿಂದ ನಿರ್ಗಮಿಸಿದರೆ ಸಂತೋಷ. ಇವತ್ತು ನಾವು ಇಲ್ಲಿಂದ ನಿರ್ಗಮಿಸಿದರೆ ಸಂತೋಷ. ಇವತ್ತು ನಾವು ಇಲ್ಲಿಂದ ಸುಖಾಂತದಲ್ಲಿ ನಿರ್ಗಮಿಸೋಣ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅತ್ಯಂತ ಸ್ಪಷ್ಟವಾಗಿ, ಸರಳವಾದಂಥ ರೀತಿಯಲ್ಲಿ ಇದರಲ್ಲಿ ಏನು ಅಪಾಯ ಅಡಗಿದೆ, ಇದರಿಂದ ನಿಮಗೇನು ಅಪಕೀರ್ತಿ ಬರುತ್ತದೆ ಎಂದು ಹೇಳಿದ್ದೇವೆ. ಒಂದು ವೇಳೆ, ಹಿಂದೆ ನಮ್ಮವರೇ ಇದಕ್ಕೆ ಕೈ ಹಾಕಿದ್ದರೂ ಕೂಡ ಅದನ್ನು ನೀವು ಮಾರ್ಗದರ್ಶನವಾಗಿ ತೆಗೆದುಕೊಳ್ಳಬೇಡಿ ಎಂದೆಲ್ಲಾ ಹೇಳಿದ್ದೇವೆ. ಆದರೆ, ಅವರ ಮನೋನಿಶ್ಚಯ ನೋಡಿದರೆ, ಪರವಾಗಿಲ್ಲ, ನಮಗೆ ಅಧಿಕಾರವೇನು ದಿವಸವೂ ಬರುವುದಿಲ್ಲ, ನಾವು ಈ ಕೆಲಸ ಮಾಡಲು ತಯಾರಿದ್ದೇವೆ, ನಿಮ್ಮ ಕೆಲಸವನ್ನು ನೀವು ಮಾಡಿಕೊಂಡು ಹೋಗಿ, ನಮ್ಮ ಕೆಲಸವನ್ನು ನಾವು ಮಾಡಿಕೊಳ್ಳುತ್ತೇವೆ ಎನ್ನುವ ತೀರ್ಮಾನಕ್ಕೆ ಅವರು ಬಂದಿದ್ದರೆ, ಅವರ ಕೆಲಸವನ್ನು ಅವರು ಮುಂದುವರೆಸಿಕೊಂಡು ಹೋಗಲಿ. Collection ಚೆನ್ನಾಗಿ ಆಗಲಿ ಎಂದು ಅವರಿಗೆ ನಾವು ಶುಭವನ್ನು ಹಾರೈಸುತ್ತೇವೆ. ನಿಮ್ಮನ್ನು ಗೌರವಿಸಿ, ಈ ಶಾಸನವನ್ನು ಅಂಗೀಕಾರ ಮಾಡುವುದಕ್ಕೆ ನಾವು ಬದ್ಧರಾಗುವುದಕ್ಕೆ ತಯಾರಾಗಿಲ್ಲ ಎನ್ನುವ ನಮ್ಮ ವಿಚಾರವನ್ನು ಇಲ್ಲಿ ಮಂಡಿಸಿ, ನಮಗೆ ಪ್ರಜಾಪ್ರಭುತ್ವದಲ್ಲಿ ಇರುವ ಒಂದೇ ಮಾರ್ಗವನ್ನು ಅನುಸರಿಸಿ ನಾವು walk out ಮಾಡಿ ಹೊರಗೆ ಹೋಗುತ್ತೇವೆ.

SRI A. KRISHNAPPA : This amounts only to fraud regularization, ಅಷ್ಟೇ.

(ಈ ಹಂತದಲ್ಲಿ ಕಾಂಗ್ರೇಸ್ ಪಕ್ಷದ ಸದಸ್ಯರು ಶ್ರೀ ರಮೇಶ್ ಕುಮಾರ್ ರವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, "ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಮತ್ತು ವಿಧಾನ ಪರಿಷತ್ತಿನಿಂದ ಎರಡನೆಯ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಯೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಮತ್ತು ವಿಧಾನ ಪರಿಷತ್ತಿನಿಂದ ಎರಡನೆಯ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 4ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೇ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಡಾ : ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, "ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಹಾಗೂ ವಿಧಾನ ಪರಿಷತ್ತಿನಿಮದ ಎರಡನೆಯ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಹಾಗೂ ವಿಧಾನ ಪರಿಷತ್ತಿನಿಂದ ಎರಡನೇಯ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

14. ಪ್ರಕಟಣೆ

ಅಧ್ಯಕ್ಷರು : ಈಗ ಬೆಳಗಾವಿಯಲ್ಲಿ ನಡೆದ ಅಧಿವೇಶನದ ಸಂಕ್ಷಿಪ್ತ ವರದಿಯನ್ನು ಓದುತ್ತಿದ್ದೇನೆ.

ಬೆಳಗಾವಿಯಲ್ಲಿ ಜರುಗಿದ 12 ನೇ ವಿಧಾನ ಸಭೆಯ ನಾಲ್ಕನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೆರಡನೇ ವಿಧಾನಸಭೆಯ ನಾಲ್ಕನೇ ಅಧಿವೇಶನವು ಬೆಂಗಳೂರಿನಿಂದ ಹೊರಗೆ ಪ್ರಪ್ರಥಮವಾಗಿ ಬೆಳಗಾವಿಯಲ್ಲಿ ದಿನಾಂಕ. 25ರಿಂದ 29ನೇ ಸೆಪ್ಟೆಂಬರ್ 2006ರವರೆಗೆ ಒಟ್ಟು 5 ದಿನಗಳಲ್ಲಿ ಸುಮಾರು 32 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿದೆ.